

MAG(2)PRB/CR/165/2022-23 Title code: KARKAN27951

# ಮುಂಜಾನೆ ವಾರ್ತೆ

ಇ–ಪೇಪರ್: www.munjanevarthe.com

EDITOR: H.L.AMARANATH

MUNJANE VARTHE

ಸಂಪಾದಕ: ಹೆಚ್.ಎಲ್ ಅಮರನಾಥ್

ಕನ್ನಡ ದಿನಪತ್ರಿಕೆ

VOLUME : 2 ISSUE: 138 ಸಂಪುಟ: 02 ಸಂಚಿಕೆ: 143 ಪುಟಗಳು: 04 munjanevarthe 09 TUESDAY JULY 2024 09 ಮಂಗಳವಾರ ಜುಲೈ 2024 ₹ 2



ಜಾಹೀರಾತಿಗಾಗಿ ಸಂಪರ್ಕಿಸಿ

9663122276

www.munjanevarthe.com


ಅಭೂತಪೂರ್ವ ಗೆಲುವು ಮತದಾರರಿಗೆ ಕೃತಜ್ಞತಾ ಸಮಾವೇಶ ವಿವರಪುಟ 02

ವೀರಶೈವ ಮಹಾಸಭೆ ಅಧ್ಯಕ್ಷ ಸ್ಥಾನ ಕಮರಹಳ್ಳಿ ರವಿ ಆಯ್ಕೆ ವಿವರಪುಟ 03

ಮನುಷ್ಯ ಜೀವನದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಅವಶ್ಯಕ ವಿವರಪುಟ 04

# ಕಲುಷಿತ ನೀರು ಪೂರೈಕೆಯಾದ್ರೆ ಅಧಿಕಾರಿಗಳೇ ಹೊಣೆ



ಬೆಂಗಳೂರು: ರಾಜ್ಯದಲ್ಲಿ ಡೆಂಗ್ಯೂ ಪ್ರಕರಣಗಳ ಏರಿಕೆ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ಲಾರ್ವಾ ಸಮೀಕ್ಷೆ, ಸೊಳ್ಳೆ ನಿಯಂತ್ರಣದ ಜತೆಗೆ ಮನೆಮನೆಗೆ ತೆರಳಿ ಆರೋಗ್ಯ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತಿದೆ. ಈ ನಡುವೆ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿರುವ ಸಿಎಂ ಸಿದ್ದರಾಮಯ್ಯ ಅವರು, ಜನರಿಗೆ ಕಲುಷಿತ ನೀರು ಪೂರೈಕೆಯಾಗದಂತೆ ಎಚ್ಚರಿಕೆ ವಹಿಸಬೇಕು. ಪ್ರತಿ 15 ದಿನಗಳಿಗೊಮ್ಮೆ ನೀರಿನ ಮೂಲಗಳಲ್ಲಿ ಕಡ್ಡಾಯವಾಗಿ ಗುಣಮಟ್ಟ ಪರೀಕ್ಷೆ ನಡೆಸಬೇಕು ಎಂದು ಸೂಚನೆ ನೀಡಿದ್ದಾರೆ. ಕಲುಷಿತ ನೀರಿನಿಂದ ಯಾವುದೇ ತೊಂದರೆ ಉಂಟಾದರೆ ಸಂಬಂಧಪಟ್ಟ ಅಧಿಕಾರಿಯನ್ನು ನೇರ ಜವಾಬ್ದಾರಿ ಮಾಡಲಾಗುವುದು. ತುಕ್ಕು ಹಿಡಿದ ಹಳೆಯ ಪೈಪ್ ಬದಲಾವಣೆ ಮಾಡಬೇಕು. ಪ್ರತಿ 15 ದಿನಗಳಿಗೊಮ್ಮೆ ನೀರಿನ ಮೂಲದಲ್ಲಿ ಹಾಗೂ ವಿತರಣಾ ಬಿಂದುವಿನಲ್ಲಿನ ನೀರಿನ ಗುಣಮಟ್ಟವನ್ನು ಪ್ರಯೋಗಾಲಯದಲ್ಲಿ ಕಡ್ಡಾಯವಾಗಿ ಪರೀಕ್ಷೆ ಮಾಡಬೇಕು. ನೀರಿನ ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾದ ಕಡೆಗಳಲ್ಲಿ ಹೊಸ ಮೂಲದಿಂದ ನೀರು ಪೂರೈಕೆ ಮಾಡಬೇಕು ಎಂದು ತಿಳಿಸಿದ್ದಾರೆ.

ಎಲ್ಲಾ ಜಿಲ್ಲೆಗಳಲ್ಲಿ ಆದಷ್ಟು ಬೇಗನೆ ಘನ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಆರಂಭಿಸಬೇಕು. ಇನ್ನೂ 55 ಕಡೆಗಳಲ್ಲಿ ಘನತ್ಯಾಜ್ಯ ಘಟಕಗಳ ನಿರ್ಮಾಣ ಪ್ರಕ್ರಿಯೆ ನಡೆಯುತ್ತಿದ್ದು, ಆದಷ್ಟು ಬೇಗನೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಬೇಕು. ತ್ಯಾಜ್ಯ ನೀರು ಶುದ್ಧೀಕರಣ ಘಟಕ ಕಾರ್ಯಾರಂಭಿಸುವ ಮೂಲಕ ಕೊಳಚೆ ನೀರು ನೇರವಾಗಿ ಕೆರೆಗಳಿಗೆ ಸೇರುವುದನ್ನು ತಪ್ಪಿಸಬೇಕು. ಮೈಸೂರಿನ ದಳವಾಯಿ ಕೆರೆಗೆ ಕೊಳಚೆ ನೀರು ಸೇರುವುದನ್ನು ಸಂಪೂರ್ಣವಾಗಿ ತಪ್ಪಿಸಬೇಕು ಎಂದು ಹೇಳಿದ್ದಾರೆ.

## ಮನೆ ಬಾಗಿಲಿಗೆ ಆರೋಗ್ಯ ಸೇವೆ ಒದಗಿಲು ರಾಜ್ಯ ಸರ್ಕಾರದ ಚಿಂತನೆ



ಬೆಂಗಳೂರು: ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರ, ಮನೆಬಾಗಿಲಿಗೆ ಔಷಧ ಪೆಟ್ಟಿಗೆ ವಿತರಿಸುವ ಮಹತ್ವಾಕಾಂಕ್ಷಿ 'ಗೃಹ ಆರೋಗ್ಯ ಯೋಜನೆ' ಜಾರಿಗೆ ತಯಾರಿ ನಡೆಸುತ್ತಿದೆ.

ರಾಜ್ಯದಲ್ಲಿ ಈಗಾಗಲೇ ಗೃಹ ಜ್ಯೋತಿ, ಗೃಹ ಲಕ್ಷ್ಮಿ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಈ ಗ್ಯಾರಂಟಿ ಯೋಜನೆಗಳ ಮಾದರಿಯಲ್ಲೇ ಪ್ರತಿಯೊಬ್ಬರ ಮನೆ ಬಾಗಿಲಿಗೆ ವೈದ್ಯರನ್ನು ಕಳುಹಿಸಿ ಆರೋಗ್ಯ ತಪಾಸಣೆ ನಡೆಸುವ ನಿಟ್ಟಿನಲ್ಲಿ ಈ ಹೊಸ ಯೋಜನೆ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಲೋಕಸಭೆ ಚುನಾವಣೆ ಇದ್ದ ಕಾರಣ ನೀತಿ ಸಂಹಿತೆ ಜಾರಿಯಾಗಿತ್ತು. ಹಾಗಾಗಿ, ಈ ಯೋಜನೆ ಜಾರಿಗೆ ವಿಳಂಬವಾಗಿತ್ತು. ಇದೀಗ ಗೃಹ ಆರೋಗ್ಯ ಯೋಜನೆಯನ್ನು ಎಂಟು ಜಿಲ್ಲೆಗಳಲ್ಲಿ ಜಾರಿ ಮಾಡಲು ಆರೋಗ್ಯ ಇಲಾಖೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ವೈದ್ಯರ ತಂಡವು ಮನೆ ಮನೆಗೆ ಭೇಟಿ ಮಾಡಿ ಆಯ್ದ ಸಮಸ್ಯೆಗಳಿಗೆ ಉಚಿತವಾಗಿ ಔಷಧ ಒದಗಿಸುವ 'ಗೃಹ ಆರೋಗ್ಯ' ಯೋಜನೆಯಾಗಿದೆ. ಈಗಾಗಲೇ ಗೃಹ ಆರೋಗ್ಯ ಯೋಜನೆಗೆ ರೂಪುರೇಷ ಸಿದ್ದವಾಗಿದ್ದು, ಅಸಾಂಕ್ರಾಮಿಕ ರೋಗಗಳ ತಡೆ ಮತ್ತು ನಿಯಂತ್ರಣ ಕಾರ್ಯಕ್ರಮದಡಿ ಸುಮಾರು 96 ಕೋಟಿ ರೂ. ವೆಚ್ಚದಲ್ಲಿ ಯೋಜನೆ ಜಾರಿಯಾಗುತ್ತಿದೆ.

## ಸ್ವಾತಂತ್ರ್ಯೋತ್ಸವ, ಸಂವಿಧಾನ ದಿನಾಚರಣೆಯಲ್ಲಿ ಅಂಬೇಡ್ಕರ್ ಭಾವಚಿತ್ರ ಕಡ್ಡಾಯ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆ (ಆ.15) ಮತ್ತು ಸಂವಿಧಾನ ದಿನಾಚರಣೆ (ನ.6) ಸಂದರ್ಭದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ (ಆಡಿ :ಖ ಒಟಭಜಜಜಊಚಿಡಿ) ಅವರ ಭಾವಚಿತ್ರವನ್ನು ಕಡ್ಡಾಯವಾಗಿ ಇಡಬೇಕು ಎಂದು

ರಾಜ್ಯ ಸರ್ಕಾರ

ಸೂಚಿಸಿದೆ. ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ–1 ವಿಜಯ್‌ಕುಮಾರ್ ಎಚ್.ಬಿ.

ಸುತ್ತೋಲೆ ಹೊರಡಿಸಿದ್ದು, ಸರ್ಕಾರಿ ಕಾರ್ಯಕ್ರಮಗಳಲ್ಲಿ ಮಹಾತ್ಮ ಗಾಂಧಿ ಅವರ ಭಾವಚಿತ್ರದೊಂದಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನೂ ಕಡ್ಡಾಯವಾಗಿ ಇಡಲು



ಸೂಚನೆ ನೀಡಲಾಗಿದೆ.

ಜನವರಿ 26ರ ಗಣರಾಜ್ಯೋತ್ಸವ ಮಾತ್ರವಲ್ಲದೆ ಆಗಸ್ಟ್–15ರ ಸ್ವಾತಂತ್ರ್ಯ ದಿನಾಚರಣೆಯಂದು ಕೂಡ ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳು, ಸರ್ಕಾರಿ ಸ್ವಾಮ್ಯಕ್ಕೆ ಒಳಪಡುವ ಸಂಸ್ಥೆಗಳು ಹಾಗೂ ಶಾಲಾ–ಕಾಲೇಜು ಸೇರಿದಂತೆ ಸರ್ಕಾರದ ವತಿಯಿಂದ ನಡೆಯುವ ಎಲ್ಲಾ ಸಮಾರಂಭಗಳಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಭಾವಚಿತ್ರದೊಂದಿಗೆ ಸಂವಿಧಾನದ ಪಿತಾಮಹ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ಸಹ ಕಡ್ಡಾಯವಾಗಿ ಇಡಬೇಕು. ಅದೇ ರೀತಿ ನವೆಂಬರ್–26ರ ಸಂವಿಧಾನದ ದಿನಾಚರಣೆ ಸಂದರ್ಭದಲ್ಲಿ ಕೂಡ ಎಲ್ಲಾ ಸರ್ಕಾರಿ ಸಂಸ್ಥೆಗಳು, ಶಾಲಾ ಕಾಲೇಜು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಸಂವಿಧಾನದ ಪಿತಾಮಹ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ಕಡ್ಡಾಯವಾಗಿ ಇಡುವಂತೆ ಸೂಚಿಸಲಾಗಿದೆ.

## ಉತ್ತರ ಭಾರತದಲ್ಲಿ ಕುಸಿಯುತ್ತಿದೆ ಅಂತರ್ಜಲ ಮಟ್ಟ

ಹೈದರಾಬಾದ್: ಹವಾಮಾನ ಬದಲಾವಣೆಯಿಂದಾಗಿ 2002ರಿಂದ 2021ರವರೆಗೆ 450 ಕ್ಯೂಬಿಕ್? ಕಿ.ಮೀ ಅಂತರ್ಜಲ ನಷ್ಟವಾಗಿದೆ. ಅಲ್ಲದೇ ಇದು ಸವಕಳಿಗೂ ಕಾರಣವಾಗಲಿದೆ ಎಂದು ಹೊಸ ಅಧ್ಯಯನ ತಿಳಿಸಿದೆ. ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿ ಗಮನಿಸಿ, ಸ್ಯಾಟಲೈಟ್ ದತ್ತಾಂಶ ಮತ್ತು ಮಾದರಿಗಳ ಮೂಲಕ ಸಂಶೋಧಕರು ಈ ಅಧ್ಯಯನ ನಡೆಸಿದ್ದಾರೆ. ಈ ವೇಳೆ 1951ರಿಂದ 2021ರವರೆಗೆ ಮಳೆಗಾಲ (ಜೂನ್–ಸೆಪ್ಟೆಂಬರ್)ನಲ್ಲಿ ಉತ್ತರ ಭಾರತದಲ್ಲಿ ಮಳೆ ಶೇ 8.5ರಷ್ಟು ಕ್ಷೀಣಿಸಿರುವುದು ಕಂಡುಬಂದಿದೆ. ಅಲ್ಲದೇ, ಈ ಪ್ರದೇಶಗಳಲ್ಲಿ ಚಳಿಗಾಲದ ಅವಧಿ ಕೂಡ 0.3 ಡಿಗ್ರಿ ಸೆಲ್ಸಿಯಸ್ ಬೆಚ್ಚಗಿರುವುದು ದಾಖಲಾಗಿದೆ ಎಂದಿದ್ದಾರೆ. ಹೈದರಾಬಾದ್‌ನ ನ್ಯಾಷನಲ್ ಜಿಯೋಫಿಸಿಕಲ್ ರಿಸರ್ಚ್ ಇನ್ಸುಟಿಟ್ಯೂಟ್ ಸಂಶೋಧಕರ ತಂಡ ಈ ಅಧ್ಯಯನ ನಡೆಸಿದೆ. ಮಳೆಗಾಲದಲ್ಲಿನ ಕಡಿಮೆ ಮಳೆ ಮತ್ತು ಚಳಿಗಾಲದ ಬೆಚ್ಚಗಿನ ವಾತವಾರಣವೂ ನೀರಾವರಿ ನೀರಿಗೆ ಬೇಡಿಕೆ ಹೆಚ್ಚಿಸುತ್ತದೆ. ಹಾಗೆಯೇ ಇದು ಅಂತರ್ಜಲ ತುಂಬಿಸುವ ಕಾರ್ಯವನ್ನು ಕಡಿಮೆ ಮಾಡುತ್ತದೆ. ಈಗಾಗಲೇ ಉತ್ತರ ಭಾರತದಲ್ಲಿ ಅಂತರ್ಜಲ ಮಟ್ಟ ಕುಸಿದಿರುವುದನ್ನು ಸಂಶೋಧಕರ ತಂಡ ಒತ್ತಿ ಹೇಳಿದೆ.

## ರಾಷ್ಟ್ರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಕೇಂದ್ರ ಸರ್ಕಾರಕ್ಕೆ ಖರ್ಗೆ ಆಗ್ರಹ



ನವದೆಹಲಿ: ಚೀನಾ ಗಡಿಯಲ್ಲಿನ ಪರಿಸ್ಥಿತಿಯ ಬಗ್ಗೆ ಸರ್ಕಾರವು ರಾಷ್ಟ್ರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂಬ ತಮ್ಮ ಪಕ್ಷದ ಬೇಡಿಕೆಯನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುನರುಚ್ಚರಿಸಿದ್ದಾರೆ. ಪೂರ್ವ ಲಡಾಖ್‌ನ ಪಾಂಗಾಂಗ್ ಸರೋವರದ ಸುತ್ತಮುತ್ತಲಿನ ಪ್ರದೇಶದಲ್ಲಿ ಚೀನಾದ ಸೇನೆಯು ದೀರ್ಘಾವಧಿಯವರೆಗೆ ಅಗೆಯುತ್ತಿದೆ, ಶಸ್ತ್ರಾಸ್ತ್ರಗಳು ಮತ್ತು ಇಂಧನವನ್ನು ಸಂಗ್ರಹಿಸಲು ಭೂಗತ ಬಂಕರ್‌ಗಳನ್ನು ನಿರ್ಮಿಸಿದೆ ಮತ್ತು ಶಸ್ತ್ರಸಜ್ಜಿತ ವಾಹನಗಳಿಗೆ ಗಟ್ಟಿಯಾದ ಶೆಲ್ಟರ್‌ಗಳನ್ನು ನಿರ್ಮಿಸಿದೆ ಎಂದು ಹೇಳಲು ಉಪಗ್ರಹ ಚಿತ್ರಗಳನ್ನು ಉಲ್ಲೇಖಿಸಿ ಖರ್ಗೆ ಎಕ್ಸ್‌ನಲ್ಲಿ ಮಾಧ್ಯಮ ವರದಿಯನ್ನು ಹಂಚಿಕೊಂಡಿದ್ದಾರೆ. "ಮೇ 2020 ರವರೆಗೆ ಭಾರತದ ವಶದಲ್ಲಿದ್ದ ಭೂಮಿಯಲ್ಲಿ ಚೀನಾ ಪಾಂಗಾಂಗ್ ತ್ಸೋ ಬಳಿ ಮಿಲಿಟರಿ ನೆಲೆಯನ್ನು ಹೇಗೆ ನಿರ್ಮಿಸುತ್ತದೆ" ಎಂದು ಖರ್ಗೆ ಹೇಳಿದರು. ಖರ್ಗೆಯವರ ಆರೋಪದ ಬಗ್ಗೆ ಬಿಜೆಪಿ ಅಥವಾ ಕೇಂದ್ರದಿಂದ ತಕ್ಷಣದ ಪ್ರತಿಕ್ರಿಯೆಯಿಲ್ಲದಿದ್ದರೂ, ಆಡಳಿತ ಪಕ್ಷ ಮತ್ತು ಸರ್ಕಾರವು ಈ ಹಿಂದೆ ಈ ವಿಷಯದ ಬಗ್ಗೆ ಕಾಂಗ್ರೆಸ್ ಮಾಡಿದ ಎಲ್ಲಾ ಆರೋಪಗಳನ್ನು ತಿರಸ್ಕರಿಸಿದೆ. ಶಾಂತಿ ಮತ್ತು ನೆಮ್ಮದಿಯನ್ನು ಮರುಸ್ಥಾಪಿಸಲು ಪೂರ್ವ ಲಡಾಖ್‌ನಲ್ಲಿ ಉಳಿದಿರುವ ಪ್ರದೇಶಗಳಿಂದ "ಸಂಪೂರ್ಣ ನಿರ್ಗಮನ" ಸಾಧಿಸುವ ಪ್ರಾಮುಖ್ಯತೆಯನ್ನು ಭಾರತವು ಚೀನಾದೊಂದಿಗೆ ಪ್ರತಿಪಾದಿಸಿದೆ.

## ನಾಯಕತ್ವ ವಿಚಾರದಲ್ಲಿ ಗೊಂದಲ ಸೃಷ್ಟಿಸದಂತೆ ಹೈಕಮಾಂಡ್ ಸೂಚನೆ



ಬೆಂಗಳೂರು: ರಾಜ್ಯದಲ್ಲಿ ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿ ಹೇಳಿಕೆ ಕುರಿತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆದೇಶವನ್ನು ಬಹಿರಂಗವಾಗಿ ಧಿಕ್ಕರಿಸಿದ್ದ ಸಹಕಾರ ಸಚಿವ ಕೆ.ಎನ್.ರಾಜಣ್ಣ, ನಾಯಕತ್ವ ಬದಲಾವಣೆ ಸಂಬಂಧದ ಹೇಳಿಕೆ ಮೂಲಕ ಗೊಂದಲ ಸೃಷ್ಟಿಸದಂತೆ ಹೈಕಮಾಂಡ್ ಸೂಚಿಸಿದೆ ಎಂದು ಹೇಳಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಾಜಣ್ಣ, "ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿ, ಸಿಎಂ ಬದಲಾವಣೆ ಬಗ್ಗೆ ಯಾರೂ ಮಾತನಾಡಬಾರದು. ನಾಯಕತ್ವ ಬದಲಾವಣೆ ವಿಚಾರವನ್ನು ಹೈಕಮಾಂಡ್ ನೋಡಿಕೊಳ್ಳಲಿದೆ. ಹೈಕಮಾಂಡ್ ನಿರ್ಧಾರಕ್ಕೆ ಎಲ್ಲರೂ ಬದ್ಧವಾಗಬೇಕು, ಈ ವಿಷಯಗಳಲ್ಲಿ ಯಾವುದೇ ಗೊಂದಲ ಇರಬಾರದು ಎಂದು ನಾನು ಭಾವಿಸುತ್ತೇನೆ. ಎಲ್ಲೆಲ್ಲಿ ಬದಲಾವಣೆ ಬೇಕಿದೆಯೋ ಅಲ್ಲಿ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ. ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದರು.

## ಕರ್ನಾಟಕ ಮೀನುಗಾರಿಕೆ ಅಭಿವೃದ್ದಿ ನಿಗಮ ಕೇಂದ್ರ ಕಛೇರಿ ಉದ್ಘಾಟನೆ

ಬೀದರ್: ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದಿಂದ ಮೀನುಗಾರರಿಗೆ ಸರ್ಕಾರದಿಂದ ಸಂಪೂರ್ಣ ಸಹಕಾರ ಸಿಗುವ ನಿಟ್ಟಿನಲ್ಲಿ ಪ್ರಯತ್ನಿಸುತ್ತೇನೆ ಎಂದು ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ಹೇಳಿದರು. ಅವರು ಇತ್ತೀಚೆಗೆ ಮಂಗಳೂರಿನ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಗೆ ಭೇಟಿ ನೀಡಿ ಅಧ್ಯಕ್ಷರ ನೂತನ ಕೊಠಡಿ ಉದ್ಘಾಟಿಸಿ ಮಾತನಾಡಿದರು. ದಿ. ಬಿ. ನಾರಾಯಣರಾವ್ ಅವರು ಶಾಸಕರಾಗಿ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸುತ್ತಾ ಇದ್ದರು. ಅವರು ನಮ್ಮಿಂದ ಆಗಲಿ ಹೋಗಿದ್ದಾರೆ. ಅವರ ನಿಧನದ ನಂತರ ಶ್ರೀಮತಿ ಮಾಲಾ ಬಿ. ನಾರಾಯಣ ಅವರ ಸೇವೆಯನ್ನು ಗುರುತಿಸಿ ಅವರನ್ನು ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ ಎಂದು ಈಶ್ವರ ಬಿ. ಖಂಡ್ರೆ ತಿಳಿಸಿದರು.

## ಮಳೆ ಸಂತ್ರಸ್ತ ಪ್ರದೇಶಗಳಲ್ಲಿ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಿ: ಡಿಸಿಗಳಿಗೆ ಸಿಎಂ ಸೂಚನೆ

ಬೆಂಗಳೂರು: ರಾಜ್ಯದಲ್ಲಿ 2,225 ಗ್ರಾಮಗಳು ಮತ್ತು 20,38,334 ಜನರು ಪ್ರವಾಹ, ಭೂ ಕುಸಿತಕ್ಕೆ ಪ್ರತೀ ವರ್ಷ ತುತ್ತಾಗುತ್ತಾರೆ. ನಿಮ್ಮ ನಿಮ್ಮ ಜಿಲ್ಲೆಗಳಲ್ಲಿನ

ಮಳೆ ಸಂತ್ರಸ್ತ ಗ್ರಾಮಗಳನ್ನು

ಗುರುತಿಸಿ, ಅವರಿಗೆ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚಿಸಿದರು

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ನಡೆದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿ, ಈ ವರ್ಷ ಮಳೆಯಿಂದ ಮನೆ, ಬೆಳೆ ಹಾನಿ ಆಗಿರುವವರಿಗೆ ಎಸ್‌ಡಿಆರ್‌ಎಫ್ ಪ್ರಕಾರ ಪರಿಹಾರವನ್ನು ಕೂಡಲೇ ಇತ್ಯರ್ಥ ಮಾಡಬೇಕು ಎಂದು ಸೂಚನೆ ನೀಡಿದರು.

ಪಿಂಚಣಿ ಅರ್ಜಿಗಳು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಬಾಕಿ ಇವೆ ಎನ್ನುವ ಪಟ್ಟಿ ಪ್ರಸ್ತಾಪಿಸಿದ ಸಿಎಂ, ಆಯಾ ಜಿಲ್ಲಾಧಿಕಾರಿಗಳಿಗೆ ಕಾಲಮಿತಿಯೊಳಗೆ ಇತ್ಯರ್ಥ ಮಾಡಬೇಕು ಎಂದರು. ಇದೇ ವೇಳೆ ಕಾಲ ಮಿತಿ ಮೀರಿದ ಅರ್ಜಿಗಳು ಏಕೆ ಇದೆ ಎಂದು ಆಯಾ ಜಿಲ್ಲಾಧಿಕಾರಿಗಳಿಗೆ ಖಾರವಾಗಿ ಪ್ರಶ್ನಿಸಿ ಇತ್ಯರ್ಥ ಮಾಡಲು ಸೂಚಿಸಿದರು. ಪಿಂಚಣಿಗಳ ವಿಲೇ ಅವಧಿ ಸದ್ಯ 45 ದಿನ ಇದೆ. ಇದನ್ನು 30 ದಿನಕ್ಕೆ ಇಳಿಸಲಾಗುವುದು. ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಕಾನೂನು ಪ್ರಕಾರವೇ ಉದಾರತನದಿಂದ ವರ್ತಿಸಿ ಪರಿಹಾರ ನೀಡಿ ಎನ್ನುವ ಸೂಚನೆಗಳನ್ನು ಜಿಲ್ಲಾಧಿಕಾರಿಗಳಿಗೆ ಸಿಎಂ ನೀಡಿದರು. ಇನ್ನು ಸಣ್ಣ ಪುಟ್ಟ ತಾಂತ್ರಿಕ ಕಾರಣಗಳಿಗಾಗಿ ರೈತರ ಆತ್ಮಹತ್ಯೆ ಪರಿಹಾರದ ಅರ್ಜಿಗಳನ್ನು ತಿರಸ್ಕರಿಸದೆ ಉದಾರವಾಗಿ ವರ್ತಿಸಿ ರೈತ ಕುಟುಂಬಗಳಿಗೆ ಸಹಾಯ ಮಾಡಿ ಎಂದರು.

## ತುರ್ತಾಗಿ ಬಿಜೆಪಿ ಸೇರುವ ಚಿಂತನೆಯಿಲ್ಲ

ಶಿವಮೊಗ್ಗ: ನಾನು ಈಗಲೂ ಬಿಜೆಪಿಯಲ್ಲಿಯೇ ಇದ್ದೇನೆ. ಆದರೆ ತುರ್ತಾಗಿ ಬಿಜೆಪಿ ಸೇರುವ ಚಿಂತನೆ ಇಲ್ಲ, ರಾಯಣ್ಣ ಬ್ರಿಗೇಡ್ ಆರಂಭಿಸುವ ಆಲೋಚನೆ ಇದೆ ಎಂದು ಮಾಜಿ ಸಚಿವ ಕೆ.ಎಸ್ ಈಶ್ವರಪ್ಪ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಪ್ಪ ಮಕ್ಕಳ ಕೈಯಲ್ಲಿ ಬಿಜೆಪಿ ಇರುವುದು ತಪ್ಪು. ಹಿಂದೂ ಹೋರಾಟಗಾರರಿಗೆ ಮತ್ತು ಹಿಂದುತ್ವಕ್ಕೆ ನ್ಯಾಯ ಸಿಗಲಿ ಎಂದು ಚುನಾವಣೆಗೆ ಸ್ಪರ್ಧೆ ಮಾಡಿದ್ದೆ ಎಂದು ಅವರು ಹೇಳಿದ್ದಾರೆ. ಮುಡಾ ಹಗರಣದಲ್ಲಿ ಸಿಎಂ ಸಿಕ್ಕಿ ಬಿದ್ದಿದ್ದಾರೆ. ಮನೆಯಲ್ಲಿದ್ದ ಹೆಣ್ಣು ಮಕ್ಕಳನ್ನು ಬೀದಿಗೆ ತಂದಿದ್ದಾರೆ. ಈ ಹಗರಣದಲ್ಲಿ ಅವರ ಕುಟುಂಬದವರು ಭಾಗಿಯಾಗಿದ್ದಾರೆ. ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ಅಲ್ಲದೇ ಸಿಎಂ ತಕ್ಷಣ ರಾಜೀನಾಮೆ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.


ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...

www.munjanevarthe.com

ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುಗುವುದು ಈಗ ಮತ್ತಷ್ಟು ಸುಲಭ

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಮಂಗಳವಾರ 09 ಜುಲೈ 2024
TUESDAY 09 July 2024

# ಆರೋಗ್ಯ ಮತ್ತು ರಕ್ಷಣಾ ಇಲಾಖೆ ಜನರಿಗೆ ಅಗತ್ಯ: ಶಾಸಕ ಬೇಳೂರು ಗೋಪಾಲಕೃಷ್ಣ




ಸಾಗರ ವಿದ್ಯುತ್, ಕೃಷಿ, ಆರೋಗ್ಯ ಹಾಗೂ ಪೋಲೀಸ್ ಇಲಾಖೆಗಳ ಸೇವೆ ಜನರಿಗೆ ಅಗತ್ಯವಾಗಿದ್ದು ಎಲ್ಲ ಅಧಿಕಾರಿ, ಸಿಬ್ಬಂದಿ ಸಮರ್ಪಕವಾಗಿ ಸೇವೆ ಸಲ್ಲಿಸಬೇಕು. ಸಾರ್ವಜನಿಕರಿಗೆ ತೊಂದರೆಯಾಗದಿರುವಂತೆ ಒಳ್ಳೆ ರೀತಿಯಲ್ಲಿ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು ಎಂದು ಶಾಸಕ ಗೋಪಾಲಕೃಷ್ಣ ಬೇಳೂರು ಹೇಳಿದರು.

ಇಲ್ಲಿನ ಉಪವಿಭಾಗಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಕರೆಯಲಾಗಿದ್ದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಂಚಾರಿ ದಟ್ಟಣೆ ತಡೆಗೆ ಆಗ್ರಹ

ಮಳೆಗಾಲದಲ್ಲಿ ತಾಲೂಕಿನ ಹಲವು ಪ್ರದೇಶಗಳಿಗೆ ಪ್ರವಾಸಿಗರು ಹೆಚ್ಚು ಬರುತ್ತಾರೆ. ನಗರ ಪ್ರದೇಶ, ಗ್ರಾಮೀಣ ಭಾಗದ ಎಲ್ಲೆಡೆ ವಾಹನ ನಿಲ್ಲಿಸುತ್ತಿದ್ದಾರೆ. ಪ್ರಮುಖವಾಗಿ ಜೋಗಕ್ಕೆ ಪ್ರವಾಸಿಗರ ಸಂಖ್ಯೆ ಅತ್ಯಧಿಕವಾಗಿದ್ದು, ಇದನ್ನು ತಪ್ಪಿಸಲು ಪೊಲೀಸರು ಕ್ರಮ ತೆಗೆದುಕೊಳ್ಳಬೇಕು. ಸಂಚಾರಿ ಪೊಲೀಸರನ್ನು ನಿಯೋಜಿಸಬೇಕು. ಪಟ್ಟಣ ವ್ಯಾಪ್ತಿಯ ಮಾರಿಕಾಂಬಾ ದೇವಸ್ಥಾನ, ಬಿ.ಎಚ್. ರಸ್ತೆಯಲ್ಲಿ ಸಾರ್ವಜನಿಕರೂ ಓಡಾಡಲು ಹೆದರುವ ಸ್ಥಿತಿ ಎದುರಾಗಿದೆ. ಸುಗಮ ಸಂಚಾರಕ್ಕೆ ಸಚಿವರಿಗೂ ಮಾತನಾಡಿದ್ದು, ಟ್ರಾಫಿಕ್ ಠಾಣೆಗೆ ಪತ್ರ ಬರೆಯಲಾಗಿದೆ ಎಂದ ಅವರು, ತಾಲೂಕಿನಲ್ಲಿ ಗಾಂಜಾ, ಓಸಿ ದಂಧೆ ಮಾಡುವವರನ್ನೂ ಗಡಿಪಾರು ಮಾಡಬೇಕು. ಜನರು ನೆಮ್ಮದಿ ನೆಲೆಸಲು ಪೊಲೀಸರ ರಕ್ಷಣೆ ಅಗತ್ಯವಿದೆ. ಈ ನಿಟ್ಟಿನಲ್ಲಿ

ತಾಲೂಕು ವ್ಯಾಪ್ತಿಯಲ್ಲಿ ಮಳೆ ಕಳೆದ ವರ್ಷಕ್ಕಿಂತ ಉತ್ತಮವಾಗಿ ಬರುತ್ತಿದ್ದು, ಜನರಿಗೆ ಆಗುತ್ತಿರುವ ತೊಂದರೆಗಳನ್ನು ಪರಿಹರಿಸುವುದು ಎಲ್ಲರ ಉದ್ದೇಶವಾಗಿರಬೇಕು.

ಅನಗತ್ಯವಾಗಿ ರಜೆ ಹಾಕುವುದು, ಸಾರ್ವಜನಿಕರಿಗೆ ಸುಳ್ಳು ಭರವಸೆ ನೀಡುವುದು, ಸಮಸ್ಯೆಗಳಿಗೆ ಸ್ಪಂದಿಸದಿರುವುದು, ಮೊದಲಾದವುಗಳನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಕೃಷಿ ಚಟುವಟಿಕೆ ಸದ್ಯದಲ್ಲೇ ಪ್ರಾರಂಭವಾಗುತ್ತಿದ್ದು, ರೈತರಿಗೆ ಅಗತ್ಯವಿರುವ ರಸಗೊಬ್ಬರ, ಬಿತ್ತನೆ ಬೀಜ, ಔಷಧಗಳನ್ನು ಸಮರ್ಪಕವಾಗಿ ತಲುಪಿಸುವುದು ನಮ್ಮೆಲ್ಲರ ಜವಾಬ್ದಾರಿ. ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು, ಸೊಸೈಟಿಗಳ ಮೂಲಕ ರಸಗೊಬ್ಬರವನ್ನು ರೈತರಿಗೆ ತಲುಪಿಸುವುದು, ಬೆಳೆವಿಮೆ ಬಗ್ಗೆ ರೈತರಿಗೆ ಮಾಹಿತಿ ನೀಡಿ ವಿಮೆ ಮಾಡಿಸಿಕೊಳ್ಳುವಂತೆ ಪ್ರೇರೆಪಿಸುವುದು, ಕಾಲಕಾಲಕ್ಕೆ ಮಣ್ಣು ಪರೀಕ್ಷೆ ನಡೆಸಿ ರೈತರು ಉತ್ತಮ ಫಸಲು ತೆಗೆಯಲು ನೆರವಾಗಬೇಕು. ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ನೂರಾರು ಕೋಟಿ ವಿನಿಯೋಗಿಸಲಾಗಿದ್ದು, ಮುಂದಿನ ಏಪ್ರಿಲ್‌ನೊಳಗೆ ಆವಿನಹಳ್ಳಿ, ಭಾರಂಗಿ ಮತ್ತು ಕಸಬಾ ಹೋಬಳಿಗೆ ನೀರು ಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಗಮನಹರಿಸಬೇಕು. ಮಳೆಗಾದಲ್ಲಿ ರಸ್ತೆ ಪಕ್ಕ ಅಗೆದು ಓಡಾಡಲೂ ಆಗದಿರುವಂತೆ ಮಾಡಬಾರದು ಎಂದು ಎಚ್ಚರಿಕೆ ನೀಡಿದರು. ಯಾವುದೇ ಒತ್ತಡಕ್ಕೂ ಜಗ್ಗದೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಶಾಸಕರು ಖಡಕ್ಕಾಗಿ ಹೇಳಿದರು.

ಹಿಂದುಳಿದ ವರ್ಗಗಳ ಮತ್ತು ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿ ನಿಲಯಗಳಲ್ಲಿ ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ನಡೆಸಬೇಕು. ಮಕ್ಕಳ ಆರೋಗ್ಯದ ಕಾಳಜಿ ವಹಿಸುವುದು ನಮ್ಮ ಜವಾಬ್ದಾರಿಯಾಗಿದ್ದು, ಶುದ್ಧ ಹಾಗೂ ಗುಣಮಟ್ಟದ ಆಹಾರವನ್ನು ನೀಡಬೇಕು. ಎಲ್ಲೆಲ್ಲಿ ಸೋಲಾರ್ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವೋ ಅಂತಹ ಕಡೆಯಲ್ಲಿ ಗೀಸರ್ ಅಳವಡಿಸಿ ಬಿಸಿನೀರು ಸೌಲಭ್ಯ ಒದಗಿಸಬೇಕು. ಹಾಸ್ಟೆಲ್‌ಗಳಿಗೆ ಅಧಿಕಾರಿಗಳು ದಿಢೀರ್ ಭೇಟಿ ನೀಡಿ ಕುಂದುಕೊರತೆ ವಿಚಾರಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ಸುಜಾತ, ಉಪವಿಭಾಗಾಧಿಕಾರಿ ಆರ್. ಯತೀಶ್, ಕಾರ್ಯನಿರ್ವಾಹಣಾಧಿಕಾರಿ ಗುರುಕೃಷ್ಣ ಶೆಣೈ, ತಹಶೀಲ್ದಾರ್ ಚಂದ್ರಶೇಖರ್ ನಾಯ್ಕ್, ಡಿವೈಎಸ್‌ಪಿ ಗೋಪಾಲಕೃಷ್ಣ ನಾಯ್ಕ್, ಪೌರಾಯುಕ್ತ ಎಚ್.ಕೆ.ನಾಗಪ್ಪ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು. ..

# ಅಭೂತಪೂರ್ವ ಗೆಲುವು

## ಮತದಾರರಿಗೆ ಕೃತಜ್ಞತಾ ಸಮಾವೇಶ



ಕೊಳ್ಳೇಗಾಲ ಪಟ್ಟಣದ ಭ್ರಮರಾಂಭ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಚಾಮರಾಜನಗರ ಲೋಕಸಭಾ ಕ್ಷೇತ್ರದ ಜನತೆಗೆ ಕೃತಜ್ಞತಾ ಸಭೆಯ ಪೂರ್ವ ಭಾವಿ ಸಭೆಯನ್ನು ಉದ್ದೇಶಿಸಿ ಶಾಸಕರಾದ ಎ ಆರ್ ಕೃಷ್ಣಮೂರ್ತಿ ರವರು ಮಾತನಾಡಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಜನತೆಗೆ ಸಂಸದ ಸುನೀಲ್ ಬೋಸ್ ರವರು ನಮ್ಮ ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳ ಮತದಾರರಿಗೆ ಕೃತಜ್ಞತೆ ಸಲ್ಲಿಸಲು ಜುಲೈ 10 ರಂದು ಚಾಮರಾಜನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಕೃತಜ್ಞತಾ ಸಮಾವೇಶ ಆಯೋಜನೆ ಮಾಡಲಾಗಿದ್ದು ಈ ಸಭೆಗೆ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ರವರು ಉಪ ಮುಖ್ಯಮಂತ್ರಿ ಡಿಕೆ. ಶಿವಕುಮಾರ್ ರವರು ಸಚಿವರು, ಸಂಸದರು ಶಾಸಕರು ಭಾಗವಹಿಸಲಿದ್ದಾರೆ.

ಆದ್ದರಿಂದ ನಮ್ಮ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಪ್ರತಿ ಗ್ರಾಮ ಪಂಚಾಯತಿಗೆ ಎರಡು ಬಸ್ಸುಗಳನ್ನು ವ್ಯವಸ್ಥೆ ಮಾಡಲಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕಾಂಗ್ರೆಸ್ ಪಕ್ಷದ ಮುಖಂಡರಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾದ ಎಸ್. ಜಯಣ್ಣ ರವರು, ಕೆಪಿಸಿಸಿ ರಾಜ್ಯ ಉಪಾಧ್ಯಕ್ಷರಾದ ಜಿಎನ್. ನಂಜುಂಡಸ್ವಾಮಿ ರವರು, ಗ್ಯಾರಂಟಿ ಯೋಜನೆಯ ಅಧ್ಯಕ್ಷರಾದ ಚಂದ್ರು ರವರು, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರುಗಳಾದ ಕೇತಮ್ಮ , ಯೋಗೀಶ್ , ಕೊಪ್ಪಳಿ ಮಹದೇವನಾಯಕ , ವಡಗೆರೆ ದಾಸ್ , ಮಾಜಿ ತಾಲೂಕ ಪಂಚಾಯತ್ ಉಪಾಧ್ಯಕ್ಷ ಬಿ.ಬಸವಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ತೋಟೇಶ್, ಮಾಂಬಳ್ಳಿ ನಂಜುಂಡಸ್ವಾಮಿ, ನಗರಸಭೆ ಮಾಜಿ ಅಧ್ಯಕ್ಷ ಬಸ್ತಿಪುರ ಶಾಂತರಾಜು, ಸದಸ್ಯರುಗಳು ಹಾಗೂ ಕಾಂಗ್ರೆಸ್ ಪಕ್ಷದ ಮುಂಚೂಣಿ ಘಟಕದ ಪದಾಧಿಕಾರಿಗಳು, ಮುಖಂಡರು ಕಾರ್ಯಕರ್ತರು ಹಾಜರಿದ್ದರು.

# ಸಾಗರ ತಾಲ್ಲೂಕಿನ ಸಿರಿವಂತೆ ವಲಯದಲ್ಲಿ ಪೌಷ್ಟಿಕ ಆಹಾರ ಮೇಳ




ಸಾಗರ ತಾಲೂಕಿನ ಸಿರಿವಂತೆ ವಲಯದಲ್ಲಿ ಪೌಷ್ಟಿಕ ಆಹಾರ ಮೇಳ ವನ್ನು ಹಮ್ಮಿ ಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಸಾಗರದ ಎಲ್.ಬಿ. ಕಾಲೇಜಿನ ಶಿಕ್ಷಕರದ ಸರೋಜರವರು ಭಾಗವಹಿಸಿ ಕಾರ್ಯಕ್ರಮದ ಕುರಿತು ಮತ್ತು ಅರೋಗ್ಯ ಕಾಪಾಡಿಕೊಳ್ಳುವುದರ ಕುರಿತು ಮಾಹಿತಿಯನು ನೀಡಿದರು ಮಾಹಿತಿ ನೀಡುವುದರ ಜೊತೆಗೆ ಸದಸ್ಯರು ಸಿರಿಧಾನ್ಯವನ್ನು ಬಳಸಿ ಮಾಡಿರುವ ತಿನಿಸುಗಳ ಬಗ್ಗೆ ಮೆಚ್ಚುಗೆಯನು ವ್ಯಕ್ತ ಪಡಿಸಿದರು, ಕಾರ್ಯಕ್ರಮದಲ್ಲಿ ವಲಯ ಮೇಲ್ವಿಚಾರಕರು ಮತ್ತು ಗ್ರಾಮಪಂಚಾತಿ ಅಧ್ಯಕ್ಷರು, ಸಿರಿ ಘಟಕದ ಹರ್ಷರವರು ಹಾಗೂ ಜ್ಞಾನ ವಿಕಾಸ ಸಮನ್ವಯಅಧಿಕಾರಿ ಪಾಲ್ಗೊಂಡು ಮಾತನಾಡಿ ಆರೋಗ್ಯವೇ ಭಾಗ್ಯ ಎನ್ನುವುದನ್ನು ತಿಳಿಸಿದರು, ಕಾರ್ಯಕ್ರಮ ದಲ್ಲಿ ಸೇವಾಪ್ರತಿನಿಧಿ ಹಾಗೂ ಆತ್ಮೀಯ ಸದಸ್ಯರುಗಳು ಭಾಗವಹಿಸಿದ್ದರು ಉತ್ತಮ ಪೌಷ್ಟಿಕ ಆಹಾರ ಮಾಡಿಕೊಂಡು ಬಂದಿರುವವರಿಗೆ ಬಹುಮಾನವನ್ನು ವಿತರಣೆ ಮಾಡಲಾಯಿತು...

# ತೊರ್ನಹಳ್ಳಿಯ ಸ.ಹಿ.ಪ್ರಾ. ಪಾ. ಶಾಲೆಯಲ್ಲಿ ಆಂಗ್ಲ ಮಾಧ್ಯಮಕ್ಕೆ ಚಾಲನೆ

ಮಾಲೂರು:– ದಿನಾಂಕ:–08.07.2024 ರಂದು ಮಾಲೂರು ತಾಲ್ಲೂಕಿನ ಕಸಬಾ ಹೋಬಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತೊರ್ನಹಳ್ಳಿಯಲ್ಲಿ 2024– 25 ನೇ ಸಾಲಿಗೆ ಒಂದನೇ ತರಗತಿ ಕನ್ನಡ ಮಾಧ್ಯಮದೊಂದಿಗೆ ಆಂಗ್ಲ ಮಾಧ್ಯಮ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ನಡೆಯಿತು.

ಈ ಕಾರ್ಯಕ್ರಮದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದಂತಹ ಸಿ.ಆರ್. ಗೌಡ ರವರು ಮಾತನಾಡಿ ಪ್ರಾಥಮಿಕ ಶಾಲೆಗಳು ಅಣೆಕಟ್ಟುಗಳಂತಲ್ಲ, ಹೆಂಚಿನ ಕಾರ್ಖಾನೆಗಳಲ್ಲ ಅವುಗಳಿಂದ ಹೊರಬರುವ ವಸ್ತುಗಳು ಸಜೀವವಾದವು, ಸಚೇತನವಾದದು, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಶಿಕ್ಷಣದ ಮೂಲಕ ಪಡೆಯಬಹುದಾದ ಕುಶಲತೆ ಎಂದು ತಿಳಿಸಿದರು. ಈ ಶಾಲೆಯಲ್ಲಿ ಒಂದನೇ ತರಗತಿಯಿಂದ ಆಂಗ್ಲ ಮಾಧ್ಯಮ ಪ್ರಾರಂಭವಾಗಿರುವುದು ಶ್ಲಾಘನೀಯ, ಖಾಸಗಿ ಶಾಲೆಗಳಿಗಿಂತ ಸರ್ಕಾರಿ ಶಾಲೆಗಳು ಯಾವುದಕ್ಕೂ ಕಡಿಮೆಯಿಲ್ಲ. ಉತ್ತಮವಾಗಿ ಕನ್ನಡ ಮಾಧ್ಯಮ ಜೊತೆಗೆ ಆಂಗ್ಲ ಮಾಧ್ಯಮ ಬೋಧಿಸಲು ಸಿದ್ಧವಾಗಿವೆ ಎಂದರು.




ಈ ಕಾರ್ಯಕ್ರಮಕ್ಕೆ ತೊರ್ನಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಚಂಗಲ ರಾಯ ಗೌಡ, ಪಂಚಾಯಿತಿ ಸದಸ್ಯರಾದ ಶ್ರೀ ಮಂಜುನಾಥ, ಊರಿನ ಮುಖಂಡರಾದ ರೋಜಾ ರಾಜಪ್ಪ ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀ ಎಮ್ ರಾಮಾಂಜನೇಯ ಸದಸ್ಯರಾದ ಶ್ರೀಯುತ ಟಿ ಅಮೃತರಾಜು ಸತೀಶ್ ಆನಂದಪ್ಪ ಹಳೆ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾದ ಶ್ರೀ ವೆಂಕಟರಮಣಪ್ಪ ಎಂ ಸಿ ಹಳ್ಳಿ ಕ್ಲಸ್ಟರ್ನ ಸಿ ಆರ್ ಪಿ ರವರಾದ ಎಚ್.ಎಮ್.ಶ್ರೀನಿವಾಸ್ ಶಾಲೆಯ ಮುಖ್ಯ ಶಿಕ್ಷಕಿಯಾದ ಶ್ರೀಮತಿ ರಾಜೇಶ್ವರಿ ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.

ವರದಿ: ಗೋಪಾಲಕೃಷ್ಣ, ಕೋಲಾರ(ಮಾಲೂರು)

# ಶ್ರೀನಿಧಿ ಪ್ಯಾಟಿ ಆಚಾರ್ಯರು ವ್ಯಾಸತೀರ್ಥ ಸಂಶೋಧನಾ ಪ್ರತಿಷ್ಠಾನದ ನೂತನ ನಿರ್ದೇಶಕರಾಗಿ (ಪ್ರಭಾರ) ನಿಯುಕ್ತರಾಗಿದ್ದಾರೆ

ವ್ಯಾಸ ತೀರ್ಥ ವಿದ್ಯಾಪೀಠದ ಪ್ರಾಂಶುಪಾಲರಾದ ಪಂಡಿತರಾದ ಲೇಖಕರೂ ಉತ್ತಮ ವಾಗ್ಮಿಗಳೂ ಆದ ಶ್ರೀನಿಧಿ ಪ್ಯಾಟಿ ಆಚಾರ್ಯರು ವ್ಯಾಸತೀರ್ಥ ಸಂಶೋಧನಾ ಪ್ರತಿಷ್ಠಾನದ ನೂತನ ನಿರ್ದೇಶಕರಾಗಿ(ಪ್ರಭಾರ) ನಿಯುಕ್ತರಾಗಿದ್ದಾರೆ.



2018ನೇ ಇಸವಿಯಲ್ಲಿ ಪೂರ್ಣಪ್ರಜ್ಞ ಸಂಶೋಧನ ಮಂದಿರದ ಯೋಗಕೋಶ ಪ್ರಾಜೆಕ್ಟ್ನಲ್ಲಿ ಕಾರ್ಯನಿರ್ವಹಿಸಿ ಯೋಗಕೋಶವೆಂಬ ಉತ್ತಮ ಕೃತಿಯನ್ನು ನೀಡಿರುವ ಆಚಾರ್ಯರು ಅತ್ಯುತ್ತಮ ಸಂಶೋಧಕರಾಗಿಯೂ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ.

ಶ್ರೀನಿಧಿ ಆಚಾರ್ಯರು ಪಂಡಿತರಾದ ತಿರುಮಲಾಚಾರ್ಯರ ಅಸಾಮಾನ್ಯ ಕೃತಿಯಾದ ಸರಳ ಕಠಿಣ ಸಂಸ್ಕೃತವನ್ನು ವಿಶ್ವವ್ಯಾಪಿಯಾಗಿ ತಲುಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿದವರು.

ಆಚಾರ್ಯರು ಅನೇಕ ವಿದ್ವತ್ಪೂರ್ಣ ಲೇಖನಗಳ ಮೂಲಕ ಪಾಂಡಿತ್ಯಪೂರ್ಣ ಪ್ರವಚನಗಳ ಮೂಲಕ ವಿದ್ವತ್ ಲೋಕದಲ್ಲಿ ಮಾನ್ಯರಾದವರು.

ವ್ಯಾಸ ತೀರ್ಥ ಸಂಶೋಧನಾ ಮಂದಿರದ ಚುಕ್ಕಾಣಿ ಹಿಡಿದ ಶ್ರೀನಿಧಿ ಪ್ಯಾಟಿ ಆಚಾರ್ಯರಿಗೆ ಹಾರ್ದಿಕ ಅಭಿನಂದನೆಗಳು.

– ಡಾ ಡಿಪಿ ಮಧುಸೂದನ ಆಚಾರ್ಯ
ಕಾರ್ಯದರ್ಶಿಗಳು
ವ್ಯಾಸ ತೀರ್ಥ ವಿದ್ಯಾ ಪೀಠ



## ಶಿವರಾಮೇಗೌಡ್ರು

ನಾ ಊರಿನಿಂದ ಬರುವಾಗ
ಎಲ್ ಆರ್ ಎಸ್ ನೋಡ್ದೆ !

ಮಾತನಾಡಿಸೋಣ ಅನ್ಕೊಂಡೆ
ಗನ್ ಮ್ಯಾನ್ ನೋಡಿ ದೊಡ್
ಪೋಸ್ಟ್ ನಲ್ಲಿ
ಇರ್ಬಹುದು ಅನ್ಕೊಂಡೆ !

ನಾ ಬಡಪಾಯಿ ಪತ್ರಕರ್ತ
ತಪ್ಪು ತಿಳ್ಕೊಂಡೆ
ಅವ್ರಿಗೆ ಯಾವ ಅಧಿಕಾರನು
ಇಲ್ಲ ಅಂಥ
ಆಮೇಲ್ ತಿಳ್ಕೊಂಡೆ !

ಎಸ್ಕಾರ್ಟ್ ವೆಹಿಕಲ್ ಮೇಲೆ
ಸೈರನ್ ನೋಡಿ ಗಾಬರಿ
ಪಟ್ಕೊಂಡೆ !

ಸೈರನ್ ಹಾಕ್ಕೊಳೋದು
ತಪ್ಪು ಅಂತ
ಹೇಳೋಣ ಅನ್ಕೊಂಡೆ !

ಓ ಇವರು ನಮ್ ಸಿ.ಎಮ್.
ಸಾಹೇಬ್ರ ಫ್ರೆಂಡು ಅಂಥ
ತಿಳ್ಕೊಂಡು
ಬಾಯಿ ಮುಚ್ಕೊಂಡೆ !

– ಕ್ಯಾಮರಾ ಪ್ರಿಯ

# ಕೇಂದ್ರ ಕಾರ್ಯಕಾರಿಣಿ ಸಮಿತಿಯ ನಿರ್ದೇಶಕ ಸ್ಥಾನಕ್ಕೆ ಸಾಗರ ಉಪವಿಭಾಗದಿಂದ ಅವಿರೋಧವಾಗಿ ಆಯ್ಕೆಯಾಗಿರುವ ದುರ್ಗಪ್ಪರವರಿಗೆ ಸನ್ಮಾನ

*ಕೆಪಿಟಿಸಿಎಲ್ ನೌಕರರ ಸಂಘದ 2024–27ನೇ ಸಾಲಿನ ಚುನಾವಣೆಯಲ್ಲಿ ಕೇಂದ್ರ ಕಾರ್ಯಕಾರಿಣಿ ಸಮಿತಿಯ ನಿರ್ದೇಶಕ ಸ್ಥಾನಕ್ಕೆ ಸಾಗರ ಉಪವಿಭಾಗದಿಂದ ಅವಿರೋಧವಾಗಿ ಆಯ್ಕೆಯಾಗಿರುವ ದುರ್ಗಪ್ಪರವರಿಗೆ ಪಟ್ಟಣದ ಜೋಗ ರಸ್ತೆಯಲ್ಲಿರುವ ಮೆಸ್ಕಾಂ ನೌಕರರ ಸಂಘದ ಕಟ್ಟಡದಲ್ಲಿ ಸೋಮವಾರ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.*

ನಾಯಕನಾಗುವುದು ದೊಡ್ಡದಲ್ಲ. ಆ ಸ್ಥಾನ ಉಳಿಸಿಕೊಳ್ಳುವುದು ದೊಡ್ಡದು. ಹಿರಿಯರ ಮಾರ್ಗದರ್ಶನದಲ್ಲಿ,

ಸ್ಥಳೀಯವಾಗಿ ಆಗಬೇಕಿರುವ ಕೆಲಸಗಳನ್ನು ಮಾಡುತ್ತೇನೆ ಎಂದು ಕೇಂದ್ರ ಕಾರ್ಯಕಾರಿಣಿ ಸಮಿತಿಯ ನಿರ್ದೇಶಕ ಸ್ಥಾನಕ್ಕೆ ಸಾಗರ ಉಪವಿಭಾಗದಿಂದ ಅವಿರೋಧವಾಗಿ ಆಯ್ಕೆಯಾಗಿರುವ ದುರ್ಗಪ್ಪ ಹೇಳಿದರು.

ಕೆಪಿಟಿಸಿಎಲ್ ನೌಕರರ ಸಂಘದ 2024–27ನೇ ಸಾಲಿನ ಚುನಾವಣೆಯಲ್ಲಿ ಕೇಂದ್ರ ಕಾರ್ಯಕಾರಿಣಿ ಸಮಿತಿಯ ನಿರ್ದೇಶಕ ಸ್ಥಾನಕ್ಕೆ ಸಾಗರ ಉಪವಿಭಾಗದಿಂದ ಅವಿರೋಧವಾಗಿ ಆಯ್ಕೆಯಾಗಿರುವ ದುರ್ಗಪ್ಪರವರಿಗೆ ಪಟ್ಟಣದ ಜೋಗ ರಸ್ತೆಯಲ್ಲಿರುವ ಮೆಸ್ಕಾಂ ನೌಕರರ ಸಂಘದ ಕಟ್ಟಡದಲ್ಲಿ ಸೋಮವಾರ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿರಿಯರಾದ ಶ್ರೀಧರ್ರವರಿಂದ ತೆರವಾಗಿರುವ ಸ್ಥಾನಕ್ಕೆ ನನ್ನನ್ನು ಅವಿರೋಧವಾಗಿ ಆಯ್ಕೆ



ಮಾಡಿದ್ದು ಸೌಭಾಗ್ಯವೆಂದು ಭಾವಿಸಿ, ಎಲ್ಲರ ಪರವಾಗಿ ಕೆಲಸ ಮಾಡುತ್ತೇನೆ. ತಳಮಟ್ಟದ ನೌಕರರ ಕುಂದುಕೊರತೆಗಳನ್ನು ರಾಜ್ಯ ಮಟ್ಟದಲ್ಲಿ ಪ್ರಸ್ತಾಪಿಸಿ, ಸೂಕ್ತ ಸೌಲಭ್ಯ ಕೊಡಿಸುವುದು ನನ್ನ ಆದ್ಯ ಕರ್ತವ್ಯ ಎಂದ ಅವರು, ಕೆಇಬಿಯಲ್ಲಿ ಕೆಲಸಕ್ಕೆ ಸೇರುವ ಮೂಲಕ ಸಮಾಜದ ಪ್ರತಿ ಮನೆಗೂ ವಿದ್ಯುತ್ ನೀಡುವ ಸೌಭಾಗ್ಯ ನಮಗೆ ಒಲಿದಿದ್ದು ಪುಣ್ಯ. ಕರೋನಾದಂಥ ವಿಪತ್ತಿನ ಸಂದರ್ಭದಲ್ಲೂ ಹೆದರದೆ, ಮಳೆ ಚಳಿ, ಬಿಸಿಲೆನ್ನದೆ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದ್ದೇವೆ.

ಈ ಸಾರ್ವಜನಿಕ ಸೇವೆ ನಮಗೆ ತೃಪ್ತಿ ಕೊಟ್ಟಿದೆ. ಇದೇ ಸೇವಾ ಮನೋಭಾವನ್ನು ನಿಮ್ಮೆಲ್ಲರ ಸಹಕಾರದಿಂದ ಮುಂದುವರಿಸುತ್ತೇನೆ ಎಂದು ಹೇಳಿದರು.

ಸಾಗರ ಉಪವಿಭಾಗದ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರ ವೆಂಕಟೇಶ್ ಮೊದಲಾದವರು ಮಾತನಾಡಿ, ದುರ್ಗಪ್ಪರಿಗೆ ಶುಭ ಕೋರಿದರು.

ವೇದಿಕೆಯಲ್ಲಿ ಮೆಸ್ಕಾಂನ ವಿಭಾಗೀಯ ಲೆಕ್ಕಾಧಿಕಾರಿ ಉಮೇಶ್, ಸ್ಥಳೀಯ ಸಮಿತಿ ಅಧ್ಯಕ್ಷರಾದ ಸತೀಶ್, ಕಾರ್ಯದರ್ಶಿ ವೆಂಕಟೇಶ್, ಪ್ರಾಥಮಿಕ ಸಮಿತಿ ಅಧ್ಯಕ್ಷ ಕುಮಾರ್, ಕಾರ್ಯದರ್ಶಿ ಹರೀಶ್, ಸೇರಿದಂತೆ ಮೆಸ್ಕಾಂನ ಹಲವು ವಿಭಾಗದ ಸದಸ್ಯರು ಹಾಜರಿದ್ದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಮಂಗಳವಾರ 09 ಜುಲೈ 2024
TUESDAY 09 July 2024

# ಡಿಜಿಟಲ್ ಗ್ರಂಥಾಲಯ ವಿದ್ಯಾರ್ಥಿಗಳ ಕಲಿಕೆಗೆ ಜನಸಾಮಾನ್ಯರ ಜ್ಞಾನಾಭಿವೃದ್ಧಿಗೆ ಉತ್ತಮ ಅವಕಾಶ

ಕೆ.ಆರ್.ಪೇಟೆ: ಓದುವ ಹವ್ಯಾಸ ಕಡಿಮೆಯಾಗಿ ಓದುಗರ ಸಂಖ್ಯೆ ಕ್ಷೀಣಿಸುತ್ತಿದೆ. ಡಿಜಿಟಲ್ ಗ್ರಂಥಾಲಯ ವಿದ್ಯಾರ್ಥಿಗಳ ಕಲಿಕೆಗೆ ಜನಸಾಮಾನ್ಯರ ಜ್ಞಾನಾಭಿವೃದ್ಧಿಗೆ ಉತ್ತಮ ಅವಕಾಶ ಕಲ್ಪಿಸಿಕೊಡುತಿದೆ ಎಂದು ಶಾಸಕ ಹೆಚ್.ಟಿ ಮಂಜು ಹೇಳಿದರು.



ಪಟ್ಟಣದಲ್ಲಿರುವ ತಾಲ್ಲೂಕು ಪಂಚಾಯಿತಿಯ ಸಭಾಂಗಣದಲ್ಲಿ ತಾಲ್ಲೂಕು ಗ್ರಾ.ಪಂ ಗ್ರಂಥಾಲಯ ಮೇಲ್ವಿಚಾರಕರ ಸಂಘ,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಅವರ ಸಹಕಾರದಲ್ಲಿ ನಿವೃತ್ತಗೊಂಡ ಮೇಲ್ವಿಚಾರಕರಿಗೆ ಸನ್ಮಾನ ಮತ್ತು ಗ್ರಂಥಾಲಯ ಡಿಜಿಟಲ್ ಸಾಧನ ವಿತರಣಾ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮುಖಾಂತರ ಉದ್ಘಾಟಿಸಿ ಮಾತನಾಡಿದರು. ನಾನು ಬಡ ರೈತ ಕುಟುಂಬದಲ್ಲಿ ಜನಿಸಿ ಕೃಷಿ ಚಟುವಟಿಕೆಯಲ್ಲೂ ತೊಡಗಿಕೊಂಡು ಅಲ್ಪ ಸಮಯದಲ್ಲೇ ಶ್ರಮವಹಿಸಿ ಶಿಕ್ಷಣ ಪಡೆದ ನಂತರವೇ ನನ್ನ ಮೊದಲ ವೃತ್ತಿಯೇ ಗ್ರಂಥಪಾಲಕ ಬದಲಾವಣೆಯ ಕಾಲಘಟ್ಟದಲ್ಲಿ ತಾಲ್ಲೂಕಿನ ಜನತೆಯ ಹಿತ ಕಾಯಲು ಸಾರ್ವಜನಿಕ ಬದುಕಿಗಾಗಿ ಬಂದು ಉನ್ನತ ಜವಾಬ್ದಾರಿ ಸ್ಥಾನಗಳಿಸಿದ್ದೇನೆ.ಗ್ರಂಥಾಲಯದಲ್ಲಿಸೇವೆ ಸಲ್ಲಿಸುವ ಗ್ರಂಥಪಾಲಕರ ಸೇವೆ ನಿಜಕ್ಕೂ ಪರೋಪಕಾರವಾಗಿದ್ದು, ಇತರರಿಗಾಗಿ ನಮ್ಮ ಸೇವೆ ಎಂಬ ಚಿಂತನೆ ಅವರದಾಗಿದ್ದರು.ಗ್ರಂಥಾಲಯ ಇಲಾಖೆ ಭ್ರಷ್ಟಾಚಾರ ಮುಕ್ತವಾಗಿದ್ದು, ಇಲ್ಲಿನ ನೌಕರರು ಬರಿ ಜ್ಞಾನ ಪ್ರಸಾರ ಮಾಡುವ ಕಾಯಕದಲ್ಲಿ ನಿರತರಾಗಿದ್ದಾರೆ ಪರೋಪಕಾರದ ಗುಣಗಳು ಇವರ ಬದುಕಾಗಿದೆ ಇಂತಹ ಜ್ಞಾನ ಬಂಡಾರದಲ್ಲಿ ಕಾರ್ಯನಿರ್ವಹಿಸುವ ಮೇಲ್ವಿಚಾರಕರು ಬೇಜವಾಬ್ದಾರಿತನವನ್ನು ತೊಲಗಿಸಿ ಕಾಯಕ ನಿಷ್ಠೆಯಿಂದ ಕಾರ್ಯನಿರ್ವಹಿಸಬೇಕು.

ವಿದ್ಯಾವಂತ ಯುವಕರು ಗ್ರಂಥಾಲಯಗಳಲ್ಲಿ ದಿನಪತ್ರಿಕೆ, ಕಾದಂಬರಿ, ಪುಸ್ತಕ, ಸ್ವರ್ಧಾತ್ಮಕ ಪುಸ್ತಕಗಳನ್ನು ಓದುವ ಮೂಲಕ ತಮ್ಮ ಜ್ಞಾನವನ್ನು ಬೆಳಸಿಕೊಳ್ಳುತ್ತಿದ್ದರು. ಈಗ ಕಾಲ ಬದಲಾದಂತೆ ಆನ್‌ಲೈನ್ ಮೂಲಕ ವ್ಯಾಸಂಗ ಪುಸ್ತಕಗಳನ್ನು ಕಂಪ್ಯೂಟರ್‌ನಲ್ಲಿ ನೋಡಿ ಕಲಿತುಕೊಳ್ಳುವಂತಾಗಿದೆ.

ತಾಲೂಕಿನಲ್ಲಿ ಬಹುತೇಕ ಗ್ರಂಥಾಲಯಗಳ ನ್ಯೂನತೆಗಳು ತಿಳಿದಿದೆ ಅವುಗಳನ್ನ ಹೋಗಲಾಡಿಸಲು ನನ್ನ ಅಧಿಕಾರದ ಅವಧಿಯಲ್ಲಿ ಶ್ರಮ ವಹಿಸುತ್ತೇನೆ ಆ ಮಾದರಿಯಲ್ಲೇ ತಾಲ್ಲೂಕಿನ ಗ್ರಂಥಾಲಯವನ್ನು ಗ್ರಾಮೀಣ ಭಾಗದ ಪ್ರತಿಯೊಬ್ಬರಿಗು ಸಾರ್ವಜನಿಕರಿಗೂ ಮೇಲ್ವಿಚಾರಕರು ತಮ್ಮ ಪ್ರಾಮಾಣಿಕ ಸೇವೆ ಸಲ್ಲಿಸುವ ಮೂಲಕ ಜ್ಞಾನವಂತ ಸಮಾಜ ನಿರ್ಮಾಣಕ್ಕೆ ಹೆಚ್ಚಿನ ಸಹಕಾರಿಯಾಗಬೇಕು ತಿಳಿಸಿ. ಗಂಜಿಗೆರೆ ಗ್ರಾ.ಪಂ ಗ್ರಂಥಾಲಯದಲ್ಲಿ ಮೇಲ್ವಿಚಾರಕರಾಗಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿದ ಬೊಮ್ಮನಾಯಕ ರವರೆಗೆ ಅಭಿನಂದಿಸುವ ಮೂಲಕ ಸನ್ಮಾನಿಸಿ. ಜಿಲ್ಲಾ ಗ್ರಂಥಾಲಯ ಇಲಾಖೆಯಿಂದ ಓದುಗರಿಗೆ ಅನುಕೂಲವಾಗಲಿ ಎಂದು ತಾಲ್ಲೂಕಿನ ವಿವಿಧ ಡಿಜಿಟಲ್ ಗ್ರಂಥಾಲಯಗಳಿಗೆ ಲ್ಯಾಪ್ಟಾಪ್ ಮತ್ತು ಮೊಬೈಲ್ ಸೇರಿದಂತೆ ಸಾಧನಾ ಪರಿಕರಗಳನ್ನ ಶಾಸಕ ಹೆಚ್.ಟಿ ಮಂಜು ವಿತರಿಸಿದರು. ತಾಲ್ಲೂಕು ಗ್ರಾ.ಪಂ ಗ್ರಂಥಾಲಯ ಮೇಲ್ವಿಚಾರಕರ ಸಂಘದ ಅಧ್ಯಕ್ಷ ಜಿ.ವಿ ಪರಮೇಶ್ ಮಾತನಾಡಿ ಒಂದು ದಿನಕ್ಕೆ 183 ರೂ.ಗಳಿಗೆ ಪೂರ್ಣಕಾಲಿಕ ನೌಕರರಂತೆ ಗ್ರಂಥಪಾಲಕರನ್ನು ದುಡಿಸಿಕೊಳ್ಳಲಾಗುತ್ತಿದೆ.ಈ ಸಂಬಳವನ್ನು ಸಮಯಕ್ಕೆ ಸರಿಯಾಗಿ ನೀಡುವುದಿಲ್ಲ.

ಅನುದಾನದ ಕೊರತೆ ನೆಪವೊಡ್ಡಿ 3–6 ತಿಂಗಳಿಗೊಮ್ಮೆ ಸಂಬಳ ನೀಡಲಾಗುತ್ತಿದೆ. ಈ ಕಡಿಮೆ ಸಂಬಳದಲ್ಲಿ ಎಲ್ಲಾ ಸರಕಾರಿ ನೌಕರರಂತೆ 8 ಗಂಟೆ ಗ್ರಾಮೀಣ ಪ್ರದೇಶದಲ್ಲಿ ಸೇವೆ ನೀಡುತ್ತಿದ್ದಾರೆ.

ಸಂಬಳದ ಹೊರತಾಗಿ ಸರಕಾರಿ ನೌಕರರಿಗೆ ನೀಡುವ ಸಾಮಾನ್ಯ ಭವಿಷ್ಯನಿಧಿ, ಅರೋಗ್ಯ ವಿಮೆ, ಅಪಘಾತ ವಿಮೆ, ಸ್ವಾಭಾವಿಕ ಸಾವಿನ ಸವಲತ್ತುಗಳು ಸೇರಿದಂತೆ ಯಾವುದೇ ಇತರೆ ಸೌಲಭ್ಯಗಳು ಇಲ್ಲವಾಗಿದೆ. ಇದೇ ಸಂಬಳ ನೆಚ್ಚಿಕೊಂಡು ಗೌರವಯುತವಾಗಿ ಬದುಕು ನಡೆಸಲಾರದ ಪರಿಸ್ಥಿತಿಯಲ್ಲಿ ತಲುಪುತ್ತಿದ್ದೇವೆ ಎಂದು ಮನವಿಗೆ ಶಾಸಕ ಹೆಚ್.ಟಿ ಮಂಜು ಗ್ರಂಥಪಾಲಕರ ಸಮಸ್ಯೆಗಳಿಗೆ ವಿಧಾನಸಭೆಯಲ್ಲಿ ಧ್ವನಿಯಾಗಿ ನಿಲ್ಲುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎ. ಎನ್ ಜಾನಕಿರಾಮ್,ಮುಖ್ಯ ಗ್ರಂಥಾಲಯ ಜಿಲ್ಲಾ ಅಧಿಕಾರಿ ಎಂ.ವಿ ಕೃಷ್ಣಮೂರ್ತಿ,ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಸತೀಶ್, ಸಹಾಯಕ ನಿರ್ದೇಶಕ ಡಾ:ನರಸಿಂಹರಾಜು, ಗ್ರಂಥಪಾಲಕ ಜಿಲ್ಲಾ ಸಂಯೋಜಕ ಎನ್.ಯೋಗೇಶ್, ಗ್ರಂಥಪಾಲಕರ ಮೇಲ್ವಿಚಾರಕರ ಸಂಘದ ರಾಜ್ಯ ಸಹ ಕಾರ್ಯದರ್ಶಿ ಶ್ರೀರಾಮ್, ಜಿಲ್ಲಾ ಗೌರವಾಧ್ಯಕ್ಷ ವೇದಮೂರ್ತಿ,ಜಿಲ್ಲಾ ಅಧ್ಯಕ್ಷ ಧನಂಜಯ್ ಕುಮಾರ್, ಜಿಲ್ಲಾ ಕಾರ್ಯದರ್ಶಿ ರಾಜಣ್ಣ ಬಿ.ಸಿ, ತಾಲೂಕು ಉಪಾಧ್ಯಕ್ಷ ಎಂ.ಎಸ್ ಭಾರತಿ, ಕೆ.ಸಿ ಲೋಕೇಶ್, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್, ಕುಮಾರಸ್ವಾಮಿ ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿ ಗ್ರಂಥಾಲಯದ ಮೇಲ್ವಿಚಾರಕರಿದ್ದರು.

ಸುದ್ದಿಯೊಂದಿಗೆ ಮನು ಮಾಕವಳ್ಳಿ ಕೆ ಆರ್ ಪೇಟೆ

# ವೀರಶೈವ ಮಹಾಸಭೆ ಅಧ್ಯಕ್ಷ ಸ್ಥಾನ ಕಮರಹಳ್ಳಿ ರವಿ ಆಯ್ಕೆ

ಗುಂಡ್ಲುಪೇಟೆ: ಕಮರಹಳ್ಳಿ ರವಿ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ಅವಿರೋಧವಾಗಿ ಆಯ್ಕೆಯಾಗಿದ್ದು ಮೊದಲ ಅಧ್ಯಕ್ಷರಿಗೆ ಮಹಾಸಭೆ ಹಾಗೂ ಸಮುದಾಯದ ಯುವಕರು ಅಭಿನಂದನೆ ಸಲ್ಲಿಸಿದ್ದಾರೆ ತಾಲ್ಲೂಕು ವೀರಶೈವ ಮಹಾಸಭೆ



ಚುನಾವಣೆ ಜುಲೈ 21 ಘೋಷಣೆಯಾಗಿತ್ತು ವೀರಶೈವ ಮಹಾಸಭೆ ಅಧ್ಯಕ್ಷಗಾದಿ ರಾಜಕೀಯದತ್ತ ತಿರುವು ಪಡೆದು ಬಿಜೆಪಿಯಿಂದ ಮಾಜಿ ಎಪಿಎಂಸಿ ಅಧ್ಯಕ್ಷ ಸ್ಥಾನ ಕಮರಹಳ್ಳಿ ರವಿ ಗೆ ಅಂತಿಮವಾಗಿ ಒಪ್ಪಿಗೆ ನೀಡಲಾಯಿತು ಆದರೆ ಮಾಜಿ ಅಧ್ಯಕ್ಷ ಹಂಗಳ ನಂಜಪ್ಪ ನವರು ಇದಕ್ಕೆ ಸಮ್ಮತಿ ಸೂಚಿಸದೆ ಅವಿರೋಧವಾಗಿ ಆಯ್ಕೆಯಾಗಲಿ ಆದರೆ ಕಡಬೂರು ಮಂಜು ಇಲ್ಲ ಮಂಚಹಳ್ಳಿ ಬಾಬುಗೆ ನೀಡಬೇಕು ಎಂದು ಷರತ್ತು ಹಾಕಿದ್ದರು, ಆದರೆ ಇದಕ್ಕೆ ಬಿಜೆಪಿಯಲ್ಲಿ ಭಿನ್ನಮತ ಏರ್ಪಟ್ಟಿ ಹಿನ್ನಲೆ ಕೊನೆಗೆ ಅಂತಿಮವಾಗಿ ರವಿ ಹೆಸರು ಪ್ರಸ್ತಾಪ ಹಾಗುತಿದ್ದಂತೆ, ಇತ್ತ ಜೆಡಿಎಸ್ ನಿಂದ ಕಡಬೂರು ಮಂಜು ನಾಮಪತ್ರ ಸಲ್ಲಿಸಲಾಗಿತ್ತು, ಕೊನೆಯ ಕ್ಷಣದಲ್ಲಿ ಮಾಜಿ ತಾ.ಪಂ ಅಧ್ಯಕ್ಷ ಹಂಗಳ ನಟೇಶ್ ನಾಮಪತ್ರ ಸಲ್ಲಿಸಿದ್ದರು. ಈಗ ಚುನಾವಣೆಯಿಂದ ಹಿಂದೆ ಸರಿದು ನಾಲ್ಕು ಜನರಿಗೂ ಅಧಿಕಾರ ಹಂಚಿಕೆಯಾಗಿದ್ದು ಮೊದಲ ಅವಧಿ ಇಪ್ಪತ್ತು ತಿಂಗಳು ಎರಡನೇ ಮತ್ತು ಮೂರನೇ ಅವಧಿ ಹದಿನೈದು ತಿಂಗಳು ಕೊನೆಯ ಅವಧಿ ಹತ್ತು ತಿಂಗಳಿಗೆ ನಿಗಧಿ ಮಾಡಿಕೊಂಡು ಸಭೆಯಲ್ಲಿ ಒಮ್ಮತದ ತೀರ್ಮಾಣ ತೆಗೆದುಕೊಂಡ ಹಿನ್ನಲೆ ಎಲ್ಲರೂ ನಾಮಪತ್ರ ಹಿಂಪಡೆದಿದ್ದು ಅವಿರೋಧವಾಗಿ ಐದು ವರ್ಷದಲ್ಲಿ ಅವಿರೋಧ

ವರದಿ: ಮಹದೇವಪ್ರಸಾದ್ ಹಂಗಳ

# ನಗರದಲ್ಲಿ ವಿಶ್ವ ಪ್ರಾಣಿ ಧನ್ಯ ರೋಗಗಳ ದಿನಾಚರಣೆ ನಿಯಂತ್ರಣದ ಬಗ್ಗೆ ಮಾಹಿತಿ ವಿನಿಮಯ ಪ್ರಸೂತಿ ವೈದ್ಯರ ನೇಮಕಕ್ಕೆ ಗ್ರಾಮಸ್ಥರ ಆಗ್ರಹ....!!

ಹೊಸನಗರ:ಹೊಸನಗರ ತಾಲೂಕು ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಶ್ವ ಪ್ರಾಣಿ ಜನ್ಯ ದಿನಾಚರಣೆಯನ್ನ ತಾಲೂಕ ಆರೋಗ್ಯ ಅಧಿಕಾರಿ ಡಾ ಸುರೇಶ್ ನೇತೃತ್ವದಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಡಾ ಸುರೇಶ ಮಾತನಾಡಿ ಪ್ರಾಣಿಗಳ ಮೂಲಕ ಸೂಕ್ಷ್ಮ ಜೀವಿಗಳಿಂದ ಮನುಷ್ಯರಿಗೆ ಹರಡಬಲ್ಲ ಜೆನೋಟಿಕ್ ಕಾಯಿಲೆಗಳ ಬಗ್ಗೆ ಮಾಹಿತಿ ನೀಡಿ ರೇಬಿಸ್ ಹಕ್ಕಿ ಜ್ವರ ಟೋಕ್ಸೋ ಪ್ಲಾಸ್ಮೋಸಿಸ್ ಹಾವು ಕಡಿತ ನಿಫಾ ಜಪಾನೀಸ ಎನ್ಸೆ ಫಾಲಿತಿನ್ ಇಲಿ ಜ್ವರ ಪ್ಲೇಗ್ ಕೆ ಎಫ್ ಡಿ ಮೊದಲಾಗಿ ಕಾಯಿಲೆಗಳು ಪ್ರಾಣಿಗಳ ಮೂಲಕ ಹರಡಲಿದ್ದು ಇವುಗಳ ಬಗ್ಗೆ ಹಾಗೂ ಮಹಾಮಾರಿ ಡೆಂಗ್ಯೂ ನಿಯಂತ್ರಣ ಬಗ್ಗೆ ಸಮರೋಪಾದಿ ಕರ್ತವ್ಯ ನಿರ್ವಹಿಸುವಂತೆ ಮಾಹಿತಿ ನೀಡಿದ ರು ಹಾಗೂ ಜುಲೈ 11 ರಂದು ನಡೆಯಲಿರುವ



ಜನಸಂಖ್ಯಾ ದಿನಾಚರಣೆಯನ್ನು ಕ್ರಮಬದ್ಧವಾಗಿ ಆಚರಿಸುವಂತೆಯೂ ಅವರು ಸಭೆಯಲ್ಲಿ ಸೂಚಿಸಿದರು.ಈ ಸಂದರ್ಭದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಶ್ರೀಯಾನ್ ಪಿ ಕೂಟ್ ಡಾ ಸುರೇಖಾ ಡಾ ಚೈತ್ರ ಡಾ ಪವನ್ ಆಶಾ ಮೆಂಟಲ್ ಚೈತ್ರ ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಕರಿಬಸಮ್ಮ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮೊದಲಾದ ವರು ಮಾಹಿತಿ ಸಭೆಯಲ್ಲಿ ಉಪಸ್ಥಿತರಿದ್ದರು...

ವರದಿ: ತನುಜ್ ಕುಮಾರ್ ಹೊಸನಗರ.....

# ಸಂವಿಧಾನ ಬಳಗ ಕಾರ್ಯಕ್ರಮಕ್ಕೆ ಮಹಾಸಭಾ ಸದಸ್ಯರು ಭಾಗವಹಿಸಲಿದ್ದಾರೆ



ಚಾಮರಾಜನಗರ: ಚಲವಾದಿ ಮಹಾಸಭಾ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹೊನ್ನೂರು ಆಟೋ ವೆಂಕಟೇಶ್ ಚಾಲನೆ ನೀಡಿ ನಂತರ ಮಾತನಾಡಿದ ಅವರು ಜಿಲ್ಲಾಧ್ಯಂತ ಅನೇಕ ನಮ್ಮ ಮಹಾಸಭಾ ಸದಸ್ಯರು ಚಾಮರಾಜನಗರದಿಂದ ಹೊರಟು ನಂತರ ಕೊಳ್ಳೇಗಾಲ ಪಟ್ಟಣದಲ್ಲಿರುವ ಡಾ.ಬಿಆರ್ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಬೆಂಗಳೂರಿನಲ್ಲಿ ನಡೆಯುವ ಕರ್ನಾಟಕ ರಾಜ್ಯ ಸಂವಿಧಾನ ಬಳಗದವರು ಆಯೋಜಿಸಿರುವ ಒನಕೆ ಓಬವ್ವ ವೇದಿಕೆಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ಮಹಾಸಭಾ ಸದಸ್ಯರು ಭಾಗವಹಿಸುತ್ತೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಮಲ್ ನಾಗರಾಜ್, ಮಾಲಂಗಿ ಮಲ್ಲೇಶ್ ಮದ್ದೂರು ಸಿದ್ದರಾಜು, ಕೊಳ್ಳೇಗಾಲ ಚಾಮರಾಜು, ಕೋಟಂಬಳ್ಳಿ ಮಂಜು, ಚಲವಾದಿ ಮಹಾಸಭಾ ಮಾಜಿ ಅಧ್ಯಕ್ಷ ಉತ್ತಳ್ಳಿ ಬಸವಣ್ಣ, ಕಾವುದವಾಡಿ ನಾಗರಾಜು, ವೈ ಕೆ ಮೋಳೆ ಸುಧಾಕರ್, ಹನೂರು ಶ್ರೀಕಂಠ, ಗೂಳಿಪುರ ವೆಂಕಟೇಶ್, ಕೆಸ್ತೂರು ಸುನಿಲ್ ಸೇರಿದಂತೆ ಅನೇಕ ಛಲವಾದಿ ಮಹಾಸಭಾ ಸದಸ್ಯರು ಇದ್ದರು.

ವರದಿ: ಆರ್.ಉಮೇಶ್ ಮಲಾರಪಾಳ್ಯ

# ಸಂಪ್ರದಾಯದ ಹೆಸರಿನಲ್ಲಿ ಕುಟೀರಕ್ಕೆ ಕಳ್ಸಿದ್ರೇ ಜೋಕೆ.. ಮೂಲಸೌಲಭ್ಯ ನೀಡುವಂತೆ ಅಧಿಕಾರಿಗಳಿಗೆ ಸೂಚನೆ




*ಬೀಸಾಡಿಹಳ್ಳಿ ಗೊಲ್ಲರಹಟ್ಟಿಗೆ ಬೇಟಿನೀಡಿ ಕೃಷ್ಣ ಕುಟೀರದಿಂದ ಬಾಣಂತಿ ಮತ್ತು ಮಗುವನ್ನು ಮನೆಗೆ ಕಳುಹಿಸುತ್ತಿರುವ ರಾಜ್ಯಾಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌದ್ರಿ.*

ಕೊರಟಗೆರೆ:– ಬೀಸಾಡಿಹಳ್ಳಿ ಗೊಲ್ಲರಹಟ್ಟಿ ಜನರು ಮೂಢ ನಂಬಿಕೆಯ ಸಂಪ್ರದಾಯ ಬಿಡಬೇಕಿದೆ. ಮನೆಯಲ್ಲಿ ಬೆಚ್ಚಗೆ ಇರಬೇಕಾದ ಬಾಣಂತಿ ಮತ್ತು ಮಗುವನ್ನು ಮತ್ತೇ ಸಂಪ್ರದಾಯದ ಹೆಸರಿನಲ್ಲಿ ಕೃಷ್ಣ ಕುಟೀರಕ್ಕೆ ಕಳುಹಿಸಿದ್ರೇ ಮುಲಾಜಿಲ್ಲದೇ ಕಾನೂನು ರೀತಿ ಪ್ರಕರಣ ದಾಖಲಾಗುತ್ತೇ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಎಚ್ಚರಿಕೆ ನೀಡಿದರು.

ಕೊರಟಗೆರೆ ತಾಲೂಕು ಚನ್ನರಾಯನದುರ್ಗ ಹೋಬಳಿ ತೋವಿನಕೆರೆ ಗ್ರಾಪಂ ವ್ಯಾಪ್ತಿಯ ಬೀಸಾಡಿಹಳ್ಳಿ ಗೊಲ್ಲರಹಟ್ಟಿಯ ಕೃಷ್ಣ ಕುಟೀರ ಸ್ಥಳಕ್ಕೆ ತುಮಕೂರು ಜಿಲ್ಲಾಡಳಿತ ಮತ್ತು ಕೊರಟಗೆರೆ ತಾಲೂಕು ಆಡಳಿತದ ಜೊತೆ ಸೋಮವಾರ 2ನೇಸಲ ಬೇಟಿನೀಡಿದ ವೇಳೆ ಮಾತನಾಡಿದರು.

ಋತುಮತಿ ಮತ್ತು ಹೆರಿಗೆ ಆದ ಮಹಿಳೆ ಅಥವಾ ವಿದ್ಯಾರ್ಥಿಗಳಿಗೆ ಯಾರು ಮನೆಯಿಂದ ಹೊರಗಡೆ ಕಳಿಸಬಾರದು. ನಾನೇ ಖುದ್ದಾಗಿ 2ಸಲ ಬಂದು ಗ್ರಾಮಸ್ಥರಿಗೆ ಅರಿವು ಮೂಡಿಸಿ ಮಹಿಳೆಯರಿಗೆ ಧೈರ್ಯ ತುಂಬಿದ್ದೇನೆ. ಮತ್ತೇ ಇಂತಹ ಘಟನೆ ಮರುಕಳಿಸದಂತೆ ಕೊರಟಗೆರೆ ಆಡಳಿತ ವರ್ಗ ಜಾಗೃತಿ ವಹಿಸಿ ಗ್ರಾಮಸ್ಥರು ಮತ್ತು ಮಹಿಳೆಯರಿಗೆ ಅರಿವು ಮೂಡಿಸುವ ಪ್ರಯತ್ನ ಮಾಡಬೇಕಿದೆ ಎಂದು ಸೂಚಿಸಿದರು.

## ಶಾಲೆಯಲ್ಲಿ ಉಳಿಯುವ ವಿದ್ಯಾರ್ಥಿಗಳು..

ವ್ಯಾಸಂಗಕ್ಕಾಗಿ ಶಾಲೆಗೆ ತೆರಳುವ ವಿದ್ಯಾರ್ಥಿಗಳು ಋತುಮತಿ ಆದ ವೇಳೆಯಲ್ಲಿ ಬೀಸಾಡಿಹಳ್ಳಿ ಗೊಲ್ಲರಹಟ್ಟಿಯ ಸರಕಾರಿ ಶಾಲೆಯ ಆವರಣವೇ ಮನೆಯಾಗಿ ಬದಲಾಗಲಿದೆ. ಬೆಳಕಿನ ವ್ಯವಸ್ಥೆಯ ಜೊತೆ ಬಿಸಿನೀರಿನ ಸೌಲಭ್ಯವು ಇಲ್ಲದೇ ನರಕದ ಜೀವನ ನಡೆಸಬೇಕಾದ ಅನಿವಾರ್ಯತೆ ಇದ್ರು ಅಧಿಕಾರಿ ವರ್ಗ ಮತ್ತು ಸ್ಥಳೀಯ ಜನ ಪ್ರತಿನಿಧಿಗಳು ಮೌನಕ್ಕೆ ಶರಣಾಗಿರವುದೇ ವಿಪಾರ್ಯಸ. ಮುಂದೆಯಾದ್ರು ಇಂತಹ ಘಟನೆ ನಡೆಯದಂತೆ ಕ್ರಮ ವಹಿಸಬೇಕಿದೆ.

## ಕೃಷ್ಣ ಕುಟೀರಕ್ಕೆ ಶಾಶ್ವತ ಬೀಗ..

ಬೀಸಾಡಿಹಳ್ಳಿ ಗೊಲ್ಲರಹಟ್ಟಿ ಗ್ರಾಮದ ಮುಂಭಾಗವೇ ಇರುವ ಕೃಷ್ಣ ಕುಟೀರಕ್ಕೆ ಮಹಿಳಾ ರಾಜ್ಯಾಧ್ಯಕ್ಷೆ ನೇತೃತ್ವದಲ್ಲಿ ಶಾಶ್ವತವಾಗಿ ಬೀಗಹಾಕಿ ಮತ್ತೇ ಬಾಗಿಲು ತೆರೆಯುದಂತೆ ಬೀಗದ ಕೀ ತಹಶೀಲ್ದಾರ್ ಕೆ.ಮಂಜುನಾಥಗೆ ಹಸ್ತಾಂತರ ಮಾಡಿದರು. ಕೃಷ್ಣ ಕುಟೀರದಲ್ಲಿ ನೂತನವಾಗಿ ಗ್ರಂಥಾಲಯ ತೆರೆದು ಗ್ರಾಮದ ಜನರೇ ನಮ್ಮ ಸಮಾಜಕ್ಕೆ ಆದರ್ಶವಾಗಿ ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಮೂಡ ನಂಬಿಕೆಯನ್ನು ಕಿತ್ತೂ ಹಾಕಿ ಶಿಕ್ಷಣಕ್ಕೆ ಆಧ್ಯತೆ ನೀಡಬೇಕು ಎಂದು ಸೂಚಿಸಿದರು.

### 3 ತಿಂಗಳ ಕೂಸಿಗೆ ಅಧ್ಯಕ್ಷರ ಹೆಸರು..

ಗೊಲ್ಲರಹಟ್ಟಿಗೆ ಸತತ 2ನೇ ಸಲ ಆಗಮಿಸಿ ಗ್ರಾಮಸ್ಥರಿಗೆ ಮೂಢನಂಬಿಕೆಯ ಬಗ್ಗೆ ಅರಿವು ಮೂಡಿಸಿ ಬಾಣಂತಿ ಮತ್ತು ಮಗುವನ್ನು ಮನೆಗೆ ಸೇರಿಸಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌದ್ರಿಯ ಹೆಸರನ್ನೇ ಗ್ರಾಮಸ್ಥರು ಮತ್ತು ಕುಟುಂಸ್ಥರು ತಮ್ಮ 3ತಿಂಗಳ ಹೆಣ್ಣು ಮಗುವಿಗೆ ನಾಗಲಕ್ಷ್ಮೀ ಎಂದೇ ನಾಮಕರಣ ಮಾಡುವ ಮೂಲಕ ಹಳೆಯ ಸಂಪ್ರದಾಯಕ್ಕೆ ತಿಲಾಂಜಲಿ ಆಡಿರುವ ಘಟನೆ ನಡೆಯಿತು.

### ಮೂಲಸೌಲಭ್ಯಕ್ಕೆ ಆಧ್ಯತೆ ನೀಡಿ..

ಬೀಸಾಡಿಹಳ್ಳಿ ಗೊಲ್ಲರಹಟ್ಟಿಯ 45ಮನೆಯಲ್ಲಿ 200ಕ್ಕೂ ಅಧಿಕ ಜನರಿದ್ದರು ಶುದ್ದ ನೀರಿನ ವ್ಯವಸ್ಥಯಿಲ್ಲ. ಸಿಸಿರಸ್ತೆ ಮತ್ತು ಚರಂಡಿ ಇದ್ರು ಸ್ವಚ್ಚತೆಯೇ ಮರೀಚಿಕೆ ಆಗಿದೆ. ಬೀದಿ ದ್ವೀಪ ಇದ್ದರೂ ಬೆಳಕು ಇಲ್ಲದೇ ಕತ್ತಲೆ ಆವರಿಸಿದೆ. ವ್ಯಾಸಂಗಕ್ಕೆ ತೆರಳಲು ಬಸ್ಸಿನ ಸೌಲಭ್ಯವಂತು ಮೊದ್ಲೇ ಇಲ್ಲದಾಗಿದೆ. ಗ್ರಾಮಾಸ್ಥರ ಮನವಿಯಂತೆ ಮೂಲಸೌಲಭ್ಯ ಕಲ್ಪಿಸುವಂತೆ ಅಧಿಕಾರಿಗಳಿಗೆ ಮಹಿಳಾ ರಾಜ್ಯಾಧ್ಯಕ್ಷೆ ಸೂಚಿಸಿದರು.

ಬೇಟಿಯ ವೇಳೆಯಲ್ಲಿ ತಹಶೀಲ್ದಾರ್ ಮಂಜುನಾಥ.ಕೆ, ಸಿಡಿಪಿಓ ಅಂಬಿಕಾ, ಟಿಹೆಚ್ಓ ವಿಜಯಕುಮಾರ್, ಪಿಎಸೈ ಚೇತನ್, ಬೆಸ್ಕಾಂ ಎಇಇ ಯೋಗೀಶ್, ಸಮಾಜ ಕಲ್ಯಾಣ ಅಧಿಕಾರಿ ಯುಮುನಾ, ಹಿಂದುಳಿದ ವರ್ಗದ ಅನಂತರಾಮು, ಗ್ರಾಪಂ ಅಧ್ಯಕ್ಷೆ ಗಿರಿಜಮ್ಮ, ಪಿಡಿಓ ಲಕ್ಷ್ಮೀನಾರಾಯಣ್, ಸದಸ್ಯ ಸುಜಾತ, ರಮೇಶ್ ಸೇರಿದಂತೆ ಇತರರು ಇದ್ದರು.

# ಉಚಿತವಾಗಿ ಟೈ, ಬೆಲ್ಟ್, ಐಡಿ ಕಾರ್ಡ್ ವಿತರಣೆ

ಮಾಲೂರು:– ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಮ್ ಸಿಹಳ್ಳಿ ಈ ಶಾಲೆಯಲ್ಲಿ ಮಕ್ಕಳಿಗೆ ದಿನಾಂಕ 8.7.2024 ರಂದು ಮಾಲೂರು ತಾಲ್ಲೂಕಿನ ಮಡಿವಾಳ ಗ್ರಾಮ ಪಂಚಾಯತಿಯ ಸದಸ್ಯರಾದ ವೆಂಕಟೇಶ್ ಅವರು ಮಕ್ಕಳಿಗೆ ಉಚಿತವಾಗಿ ಟೈ, ಬೆಲ್ಟ್, ಐಡಿ ಕಾರ್ಡ್ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ವೆಂಕಟೇಶ್‌ರವರು ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಮ್ ಸಿ ಹಳ್ಳಿ, ಈ ಶಾಲೆಯಲ್ಲಿ ಅನೇಕ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಉತ್ತಮ ಶಿಕ್ಷಣವನ್ನು ನೀಡುತ್ತಿದ್ದಾರೆ. ಇನ್ನು ಹೆಚ್ಚು ಮಕ್ಕಳು ಶಾಲೆಗೆ ದಾಖಲಾಗಲಿ ಎಂದು ಆಶಿಸುತ್ತ, ಟೈ, ಬೆಲ್ಟ್, ಐಡಿ ಕಾರ್ಡ್ ಹಾಗೂ ಒಂದು ಕೊಠಡಿಗೆ ರಿಪೇರಿ ಕೆಲಸ ಮಾಡಿ ಬಣ್ಣ ಸಹ ಮಾಡಿಸಿ ಕೊಡಲಾಯಿತು ಎಂದರು.

ವೆಂಕಟೇಶ್ ರವರಿಗೆ ಶಾಲೆಯ ಪರವಾಗಿ ಸನ್ಮಾನಿಸಲಾಯಿತು ಹಾಗೂ ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯಿಂದ ಸುಮತಿ ರವರು ಆಗಮಿಸಿ ಡೆಂಗ್ಯೂ ಜ್ವರದ ಬಗ್ಗೆ ಎಚ್ಚರಿಕೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷರಾದ ಕೆವಿ ನಾಗರಾಜ್, ಗ್ರಾಮ ಪಂಚಾಯ್ತಿ ಸದಸ್ಯರಾದ ವೆಂಕಟೇಶ್, ಆರೋಗ್ಯ ಇಲಾಖೆಯ ಸುಮತಿ, ಹಾಗೂ ಶಾಲೆಯ ಮುಖ್ಯಶಿಕ್ಷಕರಾದ ಜಲಜಾಕ್ಷಿ, ಸಹ ಶಿಕ್ಷಕರಾದ ಎಂಆರ್ ಭಾಗ್ಯಲಕ್ಷ್ಮಿ, ಎಚ್ಎನ್ ಗೀತ, ಎನ್ ಜಿ ಕೃಷ್ಣವೇಣಿ, ಕೆ ಸುಜಾತ, ಎಸ್ ಪಿ ಭಾರತಿ ಹಾಗೂ ಇತರರು ಹಾಜರಿದ್ದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಮಂಗಳವಾರ 09 ಜುಲೈ 2024
TUESDAY 09 July 2024

# ಮನುಷ್ಯ ಜೀವನದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಅವಶ್ಯಕ

ಆಲೂರು: ಜೀವನದ ಉನ್ನತಿಗೆ ಮತ್ತು ಗೆಲುವಿಗೆ ಸಂಸ್ಕಾರ, ಸಂಸ್ಕೃತಿಗಳೇ ಮೂಲ ಬಂಡವಾಳ. ಜನಮನವನ್ನು ಜಾಗೃತಿಗೊಳಿಸಲು ಧರ್ಮ ಬೇಕು. ಮನುಷ್ಯ ಜೀವನದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಅವಶ್ಯಕ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರು ಅಭಿಪ್ರಾಯಪಟ್ಟರು. ಆಲೂರು ತಾಲೂಕಿನ ಕಾರ್ಜುವಳ್ಳಿ ಹಿರೇಮಠದಲ್ಲಿ ಮನೆ ಮನೆಗೆ ರೇಣುಕ–ಮನ ಮನಕ್ಕೆ ರೇಣುಕ ಪ್ರಥಮ ವಾರ್ಷಿಕೋತ್ಸವ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಧರ್ಮ ಸಂಸ್ಕಾರ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಮನುಷ್ಯನಿಗೆ ಹೆತ್ತ ತಾಯಿ ಹಾಗೂ ಹೊತ್ತ ಭೂಮಿ ಎಷ್ಟು ಮುಖ್ಯವೋ ಧರ್ಮವೂ ಅಷ್ಟೇ ಮುಖ್ಯ. ತಾನು ಎಲ್ಲರಿಗಾಗಿ ಅನ್ನುವುದೇ ನಿಜ ವಾದ ಧರ್ಮ. ಸತ್ಯ, ಪ್ರಾಮಾಣಿಕತೆಗಿಂತ ಹೆಚ್ಚು ಉದಾತ್ತವಾದ ಧರ್ಮ ಎಂದು ಹೇಳಿದರು. ಸದೃಢ, ಸಮೃದ್ಧ ನಾಡು ಕಟ್ಟುವುದೇ ನಮ್ಮೆಲ್ಲರ ಗುರಿಯಾಗಿರಬೇಕು. ಸಕಲ ಜೀವಾತ್ಮರ ಒಳಿತಿಗಾಗಿ ಸದಾ ಶ್ರಮಿಸಿದ ವೀರಶೈವ ಧರ್ಮಕ್ಕೆ ಶಿವಾಗಮಗಳೇ ಮೂಲ ಬೇರುಗಳು. ಶ್ರೀ ಜಗದ್ಗುರು ರೇಣುಕಾ ಚಾರ್ಯರು ಸದಾ ಶ್ರಮಿಸಿದ



ಚಿಂತನೆಗಳಲ್ಲಿ ರೇಣುಕ ಗೀತೆಯಲ್ಲಿ ಬರುವ ಅಧ್ಯಾತ್ಮ ಚಿಂತನೆಗಳು ದಾರಿದೀಪವಾಗಲೆಂದು ಶುಭ ಹಾರೈಸಿದರು. ಕಾರ್ಜುವಳ್ಳಿ ಹಿರೇಮಠದ ಸದಾಶಿವ ಶಿವಾ ಚಾರ್ಯ ಸ್ವಾಮಿ ಭಕ್ತರ ಏಳಿಗೆಗಾಗಿ ನಿರಂತರ ಶ್ರಮ ವಹಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ ಎಂದರು.

ಸಮಾರಂಭವನ್ನು ಜ್ಯೋತಿ ಬೆಳಗಿಸಿ ಹಾಸನ ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಉದ್ಘಾಟಿಸಿದರು. ಹಾರನಹಳ್ಳಿ ಶಿವಯೋಗಿ ಶಿವಾಚಾರ್ಯರು, ಸಂಕಲಾಪುರ ಧರ್ಮ ರಾಜೇಂದ್ರ ಸ್ವಾಮೀಜಿ ಮಾತನಾಡಿದರು. ಎಸ್.ಎಸ್.ಶಿವ ಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಒಳ್ಳೆಯ ಮಾತಿಗಿದೆ ಪರಿವರ್ತಿಸುವ ಶಕ್ತಿ : ಸಮಾರಂಭದ ನೇತೃತ್ವ ವಹಿಸಿದ್ದ ಕಾರ್ಜುವಳ್ಳಿ ಹಿರೇಮಠದ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಒಳ್ಳೆಯ ಮಾತಿನಲ್ಲಿ ಬದುಕನ್ನು ಪರಿವರ್ತಿ ಸುವ ಶಕ್ತಿಯಿದೆ. ಆದರ್ಶ, ಗುಣ ಮೌಲ್ಯಗಳ ಧರ್ಮ ವೀರಶೈವ. ಅಸತ್ಯದಿಂದ ಸತ್ಯದೆಡೆಗೆ ಕತ್ತಲೆಯಿಂದ ಬೆಳಕಿ ನೆಡೆಗೆ ಸಾವಿನಿಂದ ಸಾವಿಲ್ಲದೆಡೆಗೆ ಕರೆದೊಯ್ಯುವುದೇ ಗುರುವಿನ ಪರಮ ಕರ್ತವ್ಯವಾಗಿದೆ. ಮನೆ ಮನೆಗೆ ರೇಣುಕ–ಮನ ಮನಕ್ಕೆ ರೇಣುಕ ಕಾರ್ಯಕ್ರಮ ಒಂದು ವರ್ಷ ಪೂರ್ಣಗೊಂಡ ಸಂದರ್ಭದಲ್ಲಿ ಈ ಸಮಾವೇಶ ಹಮ್ಮಿಕೊಂಡಿದ್ದು ತಮಗೆ ಆತ್ಮ ಸಂತೋಷ ಉಂಟು ಮಾಡಿದೆ ಎಂದು ಹೇಳಿದರು.

ಸಾಧಕರಿಗೆ ರಂಭಾಪುರಿ ಶ್ರೀಗಳಿಂದ ಪ್ರಶಸ್ತಿ ಪ್ರದಾನ: ಆಲೂರಿನ ಎಂ.ಎಸ್.ಮಹೇಶ್ ಮುರುಡೂರು ಅವರಿಗೆ ಗುರು ಸೇವಾ ಸಂಜೀವಿನಿ, ಕಾರ್ಜುವಳ್ಳಿಯ ಕೆ.ಕೆ.ಹಾಲಪ್ಪ ಅವರಿಗೆ ಗುರು ಸೇವಾ ನಿಷ್ಠ, ಕೆ.ಪಿ.ಯಶವಂತ ಅವರಿಗೆ ಗುರು ಸೇವಾ ಕಿಂಕರ, ಬಿ.ಎನ್.ಶಿವನಂಜಪ್ಪ ಅವರಿಗೆ ಮರಣೋತ್ತರವಾಗಿ ಧರ್ಮ ಸೇವಾ ನಿಷ್ಠ, ತಿಪ್ಪಾಪುರದ ಟಿ. ಎನ್.ಗುರುಶಾಂತ ಇವರಿಗೆ ಧರ್ಮ ಸೇವಾ ಸಿಂಧು, ದೊಡ್ಡಗದ್ದವಳ್ಳಿ ವೇ.ಡಿ.ಎ.ದೇವರಾಜ ಶಾಸ್ತ್ರಿಗೆ ಧರ್ಮ ಸೇವಾ ರತ್ನ ಪ್ರಶಸ್ತಿಗಳನ್ನು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಪ್ರದಾನ ಮಾಡಿ ಆಶೀರ್ವದಿಸಿದರು. ನ್ಯಾಯವಾದಿ ಎಂ.ಎಸ್.ಮಹೇಶ, ಗುರುಶಾಂತ ಟಿ.ಎನ್.ತಿಪ್ಪಪುರ, ಪತ್ರಕರ್ತ ಹೆಬ್ಬಾಳು ಹಾಲಪ್ಪ ಬೇಲೂರು, ನಾಗರನವಿಲೆ ಶಿವಾನುಗ್ರಹ ಸೇವಾ

ಪ್ರತಿಷ್ಠಾನದ ಜಿ.ಎಸ್.ಉಮೇಶ್ ಕುಮಾರ ಗುರುರಕ್ಷೆಯಿತ್ತು ಶುಭ ಹಾರೈಸಿದರು. ಮನೆ ಮನೆಗೆ ರೇಣುಕ–ಮನ ಮನಕ್ಕೆ ರೇಣುಕ ಅಂಗವಾಗಿ ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಇಷ್ಟಲಿಂಗ ಮಹಾಪೂಜೆ ನೆರವೇರಿಸಿಭಕ್ತರಿಗೆ ಶುಭ ಹಾರೈಸಿದರು. ಸಮಾರಂಭದ ನಂತರ ಅನ್ನ ದಾಸೋಹ ಏರ್ಪಡಿಸಲಾಗಿತ್ತು.

ಆಲೂರು–ಸಕಲೇಶಪುರ ಶಾಸಕ ಸಿಮೆಂಟ್ ಮಂಜು, ಬೇಲೂರು ಶಾಸಕ ಎಚ್.ಕೆ.ಸುರೇಶ್, ಎಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಜಗದೀಶ್ ಕಬ್ಬಿನಹಳ್ಳಿ, ವೀರಶೈವ ಸಂಘದ ಪ್ರಧಾನ ಕಾರ್ಯದರ್ಶಿ ಎಸ್‌ಎಸ್ ಶಿವಮೂರ್ತಿ, ಸಹಕಾರಿದರ್ಶಿ ಡಾ.ಎಂ.ಈ.ಜಯರಾಜ್ ಇತರರು ಹಾಜರಿದ್ದರು.

# ಚಾಮರಾಜನಗರ ಲೋಕಸಭಾ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಭೆ




ತಿ.ನರಸೀಪುರ :–ಚಾಮರಾಜನಗರ ಲೋಕಸಭಾ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಭೆಯನ್ನು ದಿನಾಂಕ: 10–07–2024.ರಂದು ಬೆಳಿಗ್ಗೆ 10.30ಕ್ಕೆ. ಚಾಮರಾಜನಗರ ಪಟ್ಟಣದ. ಡಾ. ಬಿಆರ್ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ತಿಳಿಸಿದರು. ಪಟ್ಟಣದ ಕಾಂಗ್ರೆಸ್ ಕಛೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಎಂ.ಡಿ.ಬಸವರಾಜು ಚಾಮರಾಜನಗರ ಲೋಕಸಭಾ ಕ್ಷೇತ್ರದ ಮತದಾರರು ಸುನಿಲ್ ಬೋಸ್ ರವರನ್ನು ಅತ್ಯಧಿಕ ಮತಗಳ ಅಂತರದಿಂದ ಸಂಸದ ಸ್ಥಾನಕ್ಕೆ ಆಯ್ಕೆ ಮಾಡಿದ ಹಿನ್ನೆಲೆಯಲ್ಲಿ ಮತದಾರರಿಗೆ ನೂತನ ಸಂಸದ ಸುನಿಲ್ ಬೋಸ್ ಕೃತಜ್ಞತೆ ಸಲ್ಲಿಸಲಿದ್ದಾರೆ ಈ ಒಂದು ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಹಾಗೂ ಶಾಸಕರು, ವಿಧಾನ ಪರಿಷತ್ ಸದಸ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಕೃತಜ್ಞತಾ ಸಮಾರಂಭಕ್ಕೆ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಒಳಪಡುವ 8 ವಿಧಾನ ಸಭಾ ಕ್ಷೇತ್ರಗಳಿಂದ ಸುಮಾರು ಒಂದು ಲಕ್ಷಕ್ಕೂ ಅಧಿಕ ಮತದಾರರು ಭಾಗವಹಿಸಲಿದ್ದಾರೆ ತಿ.ನರಸೀಪುರ ವಿಧಾನ ಸಭಾ ಕ್ಷೇತ್ರದಿಂದ ಸುಮಾರು 8 ರಿಂದ 10 ಸಾವಿರ ಮತದಾರರು ಭಾಗವಹಿಸಲಿದ್ದಾರೆ ಎಂದರು. ಮಾಜಿ ತಾ.ಪಂ.ಅಧ್ಯಕ್ಷ ದೊಡ್ಡೇಬಾಗಿಲು ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ ಚಾಮರಾಜನಗರದಲ್ಲಿ ಜರಗುವ ಕೃತಜ್ಞತೆ ಸಭೆಗೆ ತೆರಳಲು ವಾಹನದ ವ್ಯವಸ್ಥೆಯನ್ನು ಮಾಡಲಾಗಿದೆ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮಮ್ಮ ಗ್ರಾಮಗಳಿಂದ ಮತದಾರರನ್ನು ಕರೆತಂದು ಕಾರ್ಯಕ್ರಮವನ್ನು ಯಶಸ್ವಿ ಗೊಳಿಸುವಂತೆ ಕೋರಿದರು.

ಪತ್ರಿಕಾಗೋಷ್ಠಿಯಲ್ಲಿ ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಕೆ.ಪಿ.ಸಿ.ಸಿ ಸದಸ್ಯ ತಲಕಾಡು ಸುಂದರ ನಾಯಕ,ಹಿರಿಯ ಮುಖಂಡ ಡಾ.ಜ್ಞಾನಪ್ರಕಾಶ್,ತಾ.ಪಂ.ಮಾಜಿ ಅಧ್ಯಕ್ಷ,ಹ್ಯಾಕನೂರು ಹೆಚ್.ಎನ್. ಉಮೇಶ್,ಶಿವಸ್ವಾಮಿ, ಉಪಾಧ್ಯಕ್ಷ ಪ್ರಸನ್ನ,ತಾ.ಪಂ.ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕುಕ್ಕೂರು ಗಣೇಶ್,ರಾಮಲಿಂಗಯ್ಯ

ಎಸ್.ಸಿ, ಎಸ್ ಟಿ ಗುತ್ತಿಗೆದಾರ ಸಂಘದ. ಜಿಲ್ಲಾಧ್ಯಕ್ಷ ಕೆ. ಮಲ್ಲು ಮುಖಂಡರಾದ ಹೆಮ್ಮಿಗೆ ಶೇಷಾದ್ರಿ, ಹೆಮ್ಮಿಗೆ ಗ್ರಾ.ಪಂ.ಉಪಾಧ್ಯಕ್ಷ ಸೋಮಣ್ಣ,ಬೂದಹಳ್ಳಿ ಸಿದ್ದು, ಹಿರಿಯೂರು, ನವೀನ, ದೊಳ್ಳಯ್ಯ, ಶಿವಶಂಕರ, ಸಿದ್ದಶೆಟ್ಟಿ. ಕಲಿಯೂರು ಶಿವಣ್ಣ ಸಿದ್ದರಾಜು, ಚಿಕ್ಕಣ್ಣ, ನವಿದುಲ್ಲಾ, ಅಬ್ದುಲ್ ಅತಿಕ್, ಸಚಿವರ ಆಪ್ತ ಸಹಾಯಕ ಬಸವರಾಜು. ಮಾವಿನಹಳ್ಳಿ ಮಾದೇಶ. ಧನಂಜಯ, ಬಾದಾಮಿ ಮಂಜು, ಚಿನ್ನಸ್ವಾಮಿ, ಸಿದ್ದನಹುಂಡಿ ನಟ, ಸುರೇಶ,ಇನ್ನು ಅನೇಕ ಕಾರ್ಯಕರ್ತರು ಹಾಗೂ ಮುಖಂಡರು ಭಾಗವಹಿಸಿದ್ದರು.

# ತೊಗರಿ ಬೆಳೆ ಇಳುವರಿ ಹೆಚ್ಚಿಸಲು ಮಾರ್ಗದರ್ಶನ ಪಾಲಿಸಿ–ರಾಜಶೇಖರ

ಮುಂಜಾನೆ ವಾರ್ತೆ ಸುದ್ದಿ

ತಾಳಿಕೋಟಿ: ರೈತ ಬಾಂಧವರು ತಾವು ಬೆಳೆದ ತೊಗರಿ ಬೆಳೆಯ ಇಳುವರಿ ಹೆಚ್ಚಿಸಲು ಕೆಲವು ಉತ್ಪಾದನಾ ತಾಂತ್ರಿಕತೆಗಳನ್ನು ಅನುಸರಿಸುವುದು ಅತ್ಯಗತ್ಯವಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ರಾಜಶೇಖರ ವಿಲಿಯಮ್ಸ್ ಹೇಳಿದರು. ಇತ್ತೀಚಿಗೆ ಪಟ್ಟಣದಲ್ಲಿ




ಸರ್ಕಾರಿ ಕಾರ್ಯಕ್ರಮ ಒಂದರಲ್ಲಿ ಭಾಗವಹಿಸಲು ಆಗಮಿಸಿದ ಸಂದರ್ಭದಲ್ಲಿ ತಮ್ಮ ಇಲಾಖೆಯ ಅಧಿಕಾರಿಗಳೊಂದಿಗೆ ತಾಲೂಕಿನ ಲಿಂಗದಳ್ಳಿ ಗ್ರಾಮದ ಪ್ರಗತಿಪರ ರೈತರಾದ ಗುರಣ್ಣಗೌಡ ಮೇಟಿ ಅವರ ಜಮೀನಿಗೆ ಭೇಟಿ ನೀಡಿ ನಂತರ ಪತ್ರಿಕೆಯೊಂದಿಗೆ ಮಾಹಿತಿ ಹಂಚಿಕೊಂಡರು. ಈ ಬಾರಿ ತಾಲೂಕಿನಲ್ಲಿ ಸುಮಾರು 52.950 ಹೆಕ್ಟರ್ ಕ್ಷೇತ್ರದಲ್ಲಿ ತೊಗರಿ ಬಿತ್ತನೆಯಾಗಿದೆ. ರೈತ ಬಾಂಧವರು ತಾವು ಬಿತ್ತಿದ ಬೆಳೆಗೆ ಉತ್ತಮ ಫಸಲು ಪಡೆಯುವಂತಾಗಲು ಕೆಲವು ತಾಂತ್ರಿಕತೆಗಳನ್ನು ಅನುಸರಿಸಬೇಕಾಗುತ್ತದೆ ಇದರಲ್ಲಿ ಪ್ರಮುಖವಾಗಿ ಯಾಂತ್ರಿಕೃತ ಬಿತ್ತನೆ ಅನ್ವಯ ಸರಿಯಾದ ಬೆಳೆ ಅಂತರ ಕಾಪಾಡಬೇಕು 90ಥ30 ಸೆ.ಮೀ. (ಮಧ್ಯಮಾವಧಿ ತಳಿಗಳು), 150ಥ 20 ಸೆ.ಮೀ. ಧೀರ್ಗಾವಧಿ ತಳಿಗಳು ಅಂತರದಲ್ಲಿ ಬಿತ್ತನೆ ಮಾಡಬೇಕು. ಹೆಚ್ಚಿನ ಸಸಿಗಳನ್ನು ಕಿತ್ತು ಹಾಕಬೇಕು. ಬೆಳವಣಿಗೆ ಹಂತದಲ್ಲಿ (ಬೆಳೆ ಹಂತ:45–55 ದಿನಗಳು) ತಪ್ಪದೇ ಕುಡಿ ಚಿವುಟ ಬೇಕು. ಬಿತ್ತಿದ ಅರವತ್ತು ದಿನಗಳೊಳಗೆ ಗೊಡ್ಡು ರೋಗ ಕಂಡು ಬಂದಲ್ಲಿ ಪ್ರತಿ ಲೀಟರ್ ನೀರಿಗೆ ಒಬೆರಾನ್ 0.5 ಮಿ.ಲೀ. ಮತ್ತು19:19:19,05 ಗ್ರಾಂ ಬೆಳೆಸಿ ಸಿಂಪಡಣೆ ಮಾಡಬೇಕು ಎಂದು ತಿಳಿಸಿದ ಅವರು ಇದರ ಜೊತೆಗೆ ರೈತಾಪಿ ಜನರು ರಸಗೊಬ್ಬರ ಬಳಕೆ ವಿಧಾನದ ಕುರಿತು ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಅಧಿಕಾರಿಗಳಿಂದ ಸರಿಯಾದ ಮಾಹಿತಿ ಪಡೆದುಕೊಳ್ಳಬೇಕು. ಮಳೆ ಕೊರತೆಯಾದಾಗ ಎಡೆಕುಂಟೆ ಮೂಲಕ ತೇವಾಂಶ ಕಾಪಾಡೋದು ಮತ್ತು ಸಂಧಿಗ್ಧ ಹಂತಗಳಲ್ಲಿ ನೀರು ಹಾಯಿಸುವುದು ಬೆಳೆಯ ಮುಖ್ಯ ಹಂತಗಳಾದ ಹೂವು ಹಾಗೂ ಕಾಳು ಕಟ್ಟುವ ಸಮಯದಲ್ಲಿ ಎರಡು ಬಾರಿ ನೀರು ಕೊಡುವುದರಿಂದ ಅಧಿಕ ಇಳುವರಿ ಪಡೆಯಬಹುದಾಗಿದೆ ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರಕ್ಕೆ ಸಂಪರ್ಕಿಸಬೇಕು ಎಂದು ಅವರು ತಿಳಿಸಿದರು. ಈ ಸಮಯದಲ್ಲಿ ಕೃಷಿ ಉಪನಿರ್ದೇಶಕರಾದ ಪ್ರಕಾಶ ಚೌವ್ಹಾಣ. ಸಹಾಯಕ ಕೃಷಿ ನಿರ್ದೇಶಕ ಸುರೇಶ ಬಾವಿಕಟ್ಟಿ. ಕೃಷಿ ಅಧಿಕಾರಿಗಳಾದ ಮಹೇಶ ಜೋಶಿ ಎಂ.ಎಚ್ .ಬೀಳಗಿ. ಸಿಬ್ಬಂದಿಗಳಾದ ಸಂಗಮೇಶ ಪಾಟೀಲ. ಕಿರಣ್ ಬೊಮ್ಮನಹಳ್ಳಿ. ಹನುಮಂತರಾಯ ಕುಂಟರೆಡ್ಡಿ ಇದ್ದರು.

ವರದಿ: ಸುನೀಲ್ ಎಲ್ ತಳವಾರ
ಮುಂಜಾನೆ ವಾರ್ತೆ ತಾಳಿಕೋಟಿ

# ರಾಷ್ಟ್ರ ಮತ್ತು ರಾಜ್ಯಗಳ ಅಭಿವೃದ್ಧಿಗೆ ಗ್ರಾಮೀಣ ಪ್ರದೇಶಗಳ ಸಹಕಾರಿ ಸಂಘಗಳು

ಕೆ.ಆರ್.ಪೇಟೆ: ರಾಷ್ಟ್ರ ಮತ್ತು ರಾಜ್ಯಗಳ ಅಭಿವೃದ್ಧಿಗೆ ಗ್ರಾಮೀಣ ಪ್ರದೇಶಗಳ ಸಹಕಾರಿ ಸಂಘಗಳು ಊರುಗೋಲು ಇದ್ದಂತೆ ಎಂದು ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಹಾಗೂ ಶಾಸಕರಾದ ಹೆಚ್.ಟಿ ಮಂಜು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಅಂಗರಮುದ್ದನಹಳ್ಳಿ, ಬೀಕನಹಳ್ಳಿ,ಚೌಡಸಮುದ್ರ ಗ್ರಾಮಗಳ ಹಾಲು ಉತ್ಪಾದಕರ ಸಹಕಾರ ಸಂಘದ ಡೈರಿಗಳಿಗೆ ಭೇಟಿ ನೀಡಿ ಅಧ್ಯಕ್ಷರು ನಿರ್ದೇಶಕರ ಹಾಗೂ ಗ್ರಾಮಸ್ಥರೊಂದಿಗೆ ಸಂಘ ಅಭಿವೃದ್ಧಿಯ ಬಗ್ಗೆ ಚರ್ಚಿಸಿ ಮಾತನಾಡಿದರು. ಗ್ರಾಮೀಣ ಭಾಗದ ರೈತರು ಸ್ವಾಭಿಮಾನದ ಬದುಕು ಕಟ್ಟಿಕೊಂಡು ಜೀವನ ನಡೆಸಲು ಗ್ರಾಮಗಳಲ್ಲಿ ಸ್ಥಾಪಿಸಲಾಗುವ ಸ್ವ ಸಹಾಯಕ ಸಂಘಗಳು ರಾಷ್ಟ್ರ ಮತ್ತು ರಾಜ್ಯದ ಪ್ರಗತಿಗೆ ಸಹಕಾರಿಯಾಗಿವೆ. ಸಂಘಗಳ ಅಭಿವೃದ್ಧಿಗೆ ಸರಕಾರ ಕೂಡ ಸಾಲದ ರೂಪದಲ್ಲಿ ಸಾಕಷ್ಟು ಅನುದಾನ ನೀಡುತ್ತಿದೆ. ಅದರ ಸದ್ಬಳಕೆ ಹೊಣೆ ಸಂಘಗಳ ಮೇಲೆ ಇದೆ.ಗ್ರಾಮೀಣ ಪ್ರದೇಶದ ರೈತರಿಗೆ ಹೈನುಗಾರಿಕೆ ವರದಾನವಾಗಿದೆ ಇಂತಹ ಸಂದರ್ಭದಲ್ಲಿ ಸಂಘದ ಏಳಿಗೆಗೆ ಸದಸ್ಯರ ಪಾತ್ರ ಅಗತ್ಯ ಶುದ್ಧ ಹಾಲು ಉತ್ಪಾದಿಸಿದರೆ ಸಂಘವು ಸದೃಢವಾಗುತ್ತದೆ, ಜಾನುವಾರುಗಳು ಆರೋಗ್ಯದ ಮೇಲೆ ಏರುಪೇರು ಉಂಟಾದಾಗ ಕೆಲವು ಕಾಯಿಲೆಗಳಿಂದ ತೊಂದರೆ ಹಾಗೂ ಅವುಗಳ ಪರಿಹಾರದ ಬಗ್ಗೆ ಮಾಹಿತಿ ನೀಡಿದರಲ್ಲದೆ ಪಶು



ಆಹಾರವನ್ನು ಜಾನುವಾರುಗಳಿಗೆ ಸಮರ್ಪಕವಾಗಿ ಕೊಡುವ ವಿಷಯದ ಬಗ್ಗೆ ಹಾಗೂ ಒಕ್ಕೂಟದಿಂದ ಹೈನುಗಾರರಿಗೆ ಸಿಗುವ ಸವಲತ್ತುಗಳನ್ನು ವಿವರಿಸಿ.

ತಾಲೂಕಿನ ಅಭಿವೃದ್ಧಿಗಾಗಿ ನನ್ನ ಅಧಿಕಾರವಧಿಯನ್ನು ಮುಡುಪಾಗಿಡುತ್ತೇನೆಂದು ಎಂದು ಶಾಸಕ ಹೆಚ್ ಟಿ ಮಂಜು ತಿಳಿಸಿದರು.

ಈ ಸಂದರ್ಭದಲ್ಲಿ ಅಕ್ಕಿಹೆಬ್ಬಾಹ ಹೋಬಳಿಯ ಜೆಡಿಎಸ್ ಅಧ್ಯಕ್ಷ ಬಸವಲಿಂಗಪ್ಪ, ಬೀರುವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಬಲ್ಲೇಶ್, ಉಪಾಧ್ಯಕ್ಷ ರುಕ್ಮಿಣಮ್ಮ ನಿರ್ದೇಶಕರಾದ ಶಿವರಾಮೇಗೌಡ, ಶಶಿಧರ್, ಹೇಮಾ, ವಿರೂಪಾಕ್ಷ, ದ್ಯಾವನಾಯಕ, ಧನಂಜಯ್, ವಸಂತಮ್ಮ, ಸಾವಿತ್ರಮ್ಮ,ಬಿಕನಹಳ್ಳಿ ಸಂಘದ ಅಧ್ಯಕ್ಷೆ ರಂಗಮ್ಮ ಕುಮಾರ್, ಉಪಾಧ್ಯಕ್ಷೆ ಮಂಜುಳ ರಾಮೇಗೌಡ, ನಿರ್ದೇಶಕರಾದ ಗಾಯತ್ರಿ ಕೃಷ್ಣೇಗೌಡ, ಜಯಲಕ್ಷ್ಮಿ ಶಿವರಾಮೇಗೌಡ, ಯಶೋಧ ಚಿಕ್ಕೇಗೌಡ, ಲಕ್ಷ್ಮಮ್ಮ ರಾಜೇಗೌಡ, ಲತಾ ದೇವೇಗೌಡ, ಶಶಿಕಲಾ ಸ್ವಾಮಿಗೌಡ, ಭಾಗ್ಯಮ್ಮ ಸ್ವಾಮಿ, ಸಂಘದ ಕಾರ್ಯದರ್ಶಿಗಳಾದ ಪುಟ್ಟಲಕ್ಷ್ಮಿ ವಾಸು, ಹಾಲು ಪರೀಕ್ಷಕಿ ಕುಸುಮ ರಾಜೇಗೌಡ, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್,ಸೇರಿದಂತೆ ಉಪಸ್ಥಿತರಿದ್ದರು.

ಸುದ್ದಿಯೊಂದಿಗೆ ಮನು ಮಾಕವಳ್ಳಿ
ಕೆಆರ್‌ಪೇಟೆ

# ತಾಲ್ಲೂಕಿನ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಲು ಕರ್ನಾಟಕ ಲೋಕಾಯುಕ್ತದ ಮೈಸೂರು ಪೋಲಿಸ್ ಅಧೀಕ್ಷಕರು

ತಿ.ನರಸೀಪುರ:– ತಾಲ್ಲೂಕಿನ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಲು ಕರ್ನಾಟಕ ಲೋಕಾಯುಕ್ತದ ಮೈಸೂರು ಪೋಲಿಸ್ ಅಧೀಕ್ಷಕರು ದಿನಾಂಕ:–10.07.2024 ರಂದು ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಸಭೆ ಕರೆಯಲಾಗಿದೆ. ದಿನಾಂಕ:–10.07.2024 ರ ಬುಧವಾರ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾನ 2 ಗಂಟೆ ವರಗೆ ಪಟ್ಟಣದ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಪೋಲಿಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ ಮೈಸೂರು ರವರು ತಾಲ್ಲೂಕಿನ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲು ಸಭೆ ನೆಡಸಲಿದ್ದಾರೆ ಸದರಿ ಸಭೆಯ ಸದುಪಯೋಗವನ್ನು ತಾಲ್ಲೂಕಿನ ಜನತೆ ಪಡೆದು ಕೊಳ್ಳುವಂತೆ ಮೈಸೂರು ಲೋಕಯುಕ್ತ ಕಛೇರಿಯಿಂದ ಕೋರಿದ್ದಾರೆ.

ಸರ್ಕಾರಿ ಕಛೇರಿಗಳಲ್ಲಿ ಅಧಿಕಾರಿಗಳು,ನೌಕರರು ಸಾರ್ವಜನಿಕ ಕೆಲಸಗಳಿಗೆ ಅನಗತ್ಯ ಅಲೆದಾಟ ಹಾಗೂ ವಿಳಂಬ,ತೊಂದರೆ ಮಾಡಿದರೆ ಅಂತವರ ವಿರುದ್ದ ನಿಗದಿತ ನಮೂನೆ 1 ಹಾಗೂ 2 ರಿತ್ಯ ಅರ್ಜಿಯನ್ನು ಭರ್ತಿ ಮಾಡಿ ಸೂಕ್ತ ದಾಖಲೆಗಳೊಂದಿಗೆ ದೂರು ನೀಡಬಹುದಾಗಿದೆ ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ 0821–2957 494 ಸಂಪರ್ಕಿಸಲು ಕೋರಿದ್ದಾರೆ



ಹಾಸನ ಸುದ್ದಿ: ಇಂದು ಶಾಸಕರಾದ ಸ್ವರೂಪ್ ಪ್ರಕಾಶ್ ರವರು ನಗರದ ಬಿಟ್ಟಗೋಡನಹಳ್ಳಿ ಬಳಿ ಇರುವ ರುದ್ರಭೂಮಿಯ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ವೀಕ್ಷಿಸಿದರು ಹಾಗೂ ಮುಂದಿನ ಅಭಿವೃದ್ಧಿ ಕಾಮಗಾರಿ ಅವಶ್ಯಕ ಅನುದಾನವನ್ನು ಒದಗಿಸಲಾಗುವುದು ಎಂದರು

# ಡೆಂಗ್ಯೂ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ವತಿಯಿಂದ ಮುಂಜಾಗ್ರತಾ ಕ್ರಮ



ಹಾಸನ ಸುದ್ದಿ : ಇಂದು ಶಾಸಕರಾದ ಸ್ವರೂಪ್ ಪ್ರಕಾಶ್ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಡೆಂಗ್ಯೂ ಹೆಚ್ಚಾದ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಆರೋಗ್ಯ ಇಲಾಖೆ ಅಧಿಕಾರಿಗಳೊಂದಿಗೆ ಇಂದು ಬೆಳಗ್ಗೆ ತುರ್ತು ಅಧಿಕಾರಿಗಳ ಸಭೆ ನಡೆಸಿದರು.

ಡೆಂಗ್ಯೂ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ವತಿಯಿಂದ ಏನೆಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು

ಬಳಿಕ ನಗರದಲ್ಲಿ ವಿವಿಧಡೆ ಸೊಳ್ಳೆಗಳ ಉತ್ಪತ್ತಿ ತಾಣಗಳನ್ನು ಗುರುತಿಸಿ ಔಷಧಿ ಸಿಂಪಡಿಸುವ ಕೆಲಸವನ್ನು ನಗರಸಭೆ ಹಾಗೂ ಆರೋಗ್ಯ ಇಲಾಖೆ ಜಂಟಿಯಾಗಿ ಮಾಡಬೇಕು. ಸಾರ್ವಜನಿಕರ ಸಹಕಾರ ಕೂಡ ಇದಕ್ಕೆ ಅಗತ್ಯವಾಗಿದ್ದು ತಮ್ಮ ಮನೆಯ ಸುತ್ತಮುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿದರು

ಡೆಂಗ್ಯೂ ನಿಂದಾಗಬಹುದಾದ ಸಾವಿನ ಪ್ರಮಾಣಕ್ಕೆ ಕಡಿವಾಣ ಹಾಕಬೇಕು, ಈ ನಿಟ್ಟಿನಲ್ಲಿ ಅಧಿಕಾರಿಗಳು ಶ್ರಮ ವಹಿಸಬೇಕು, ಸರ್ಕಾರದ ವತಿಯಿಂದ ಸೌಲಭ್ಯಗಳ ಅಗತ್ಯ ಇದ್ದರೆ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ನಟ್ಟು ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಆರೋಗ್ಯ ಕೇಂದ್ರದ ವೈದ್ಯರುಗಳು ಉಪಸ್ಥಿತರಿದ್ದರು.

Printed by : H.L.AMARANATH, Owned by: H.L.AMARANATH, Printed at : SREE MANJUNATHA ENTERPRISES No. 7, Tirugappa lane, Cottonpet cross, Cottonpet, Bangalore-560053.
Published at : No.97, 2nd Cross, Vivekanandanagar, Khadi Commission Layout, BSK 3rd Stage, Kathariguppe Main Road, Bengaluru-560085. Mobile: 9663122276 Editor : H.L.AMARANATH